# ಜನತಾವಾಣಿ

ಸಂಪಾದಕರು : ವಿಕಾಸ್ ಷಡಾಕ್ಷರಪ್ಪ ಮೆಳ್ಳೇಕಟ್ಟೆ

ಮಧ್ಯ ಕರ್ನಾಟಕದ ಆಪ್ತ ಒಡನಾಡಿ

ದಾವಣಗೆರೆ
ಶುಕ್ರವಾರ, ಮಾರ್ಚ್ 25, 2022

ಸಂಪುಟ : 48 ಸಂಚಿಕೆ : 314 ☎ 254736 91642 99999 RNI No: 27369/75 KA/SK/CTA-275/2021-2023. O/P @ B.V. Nagar P.O. ಪುಟ : 4 ರೂ : 4.00 www.janathavani.com janathavani@mac.com







## ಹಿಂದೂಯೇತರರಿಗೆ ದೇವಸ್ಥಾನದ ಒಳಗೆ ಅವಕಾಶ ಇಲ್ಲ: ಸ್ಪಷ್ಟನೆ

**ಹಿಂದೆಯೇ ಮಾಡಿದ ಕಾನೂನು ಈಗ ಜಾರಿ ಎಂದ ಸರ್ಕಾರ**

ಬೆಂಗಳೂರು, ಮಾ. 24 - ಹಿಂದೂ ದೇವಸ್ಥಾನಗಳ ಆವರಣದ ಸ್ವತ್ತು ಮತ್ತು ಜಾಗವನ್ನು ಹಿಂದೂ ಧರ್ಮೇತರ ಬಳಕೆಗೆ ನೀಡಬಾರದು ಎಂದು ಈ ಹಿಂದೆ ಕಾನೂನು ರೂಪಿಸಲಾಗಿದೆ. ಈಗ ಧಾರ್ಮಿಕ ಸಂಸ್ಥೆಗಳು ಅದನ್ನು ಪಾಲನೆ ಮಾಡುತ್ತಿವೆ ಎಂದು ಕಾನೂನು ಮತ್ತು ಸಂಸದೀಯ ವ್ಯವಹಾರಗಳ ಸಚಿವ ಜೆ.ಸಿ.ಮಾಧುಸ್ವಾಮಿ ವಿಧಾನ ಪರಿಷತ್‌ನಲ್ಲಿಂದು ಸ್ಪಷ್ಟಪಡಿಸಿದ್ದಾರೆ.

ಶೂನ್ಯ ವೇಳೆಯಲ್ಲಿ ಸಿ.ಎಂ.ಇಬ್ರಾಹಿಂ ವಿಷಯ ಪ್ರಸ್ತಾಪಿಸಿ ಮಂಗಳೂರು, ಉಡುಪಿ ಸೇರಿದಂತೆ ಹಲವು ಕಡೆಗಳಲ್ಲಿ ಹಿಂದೂ ಧಾರ್ಮಿಕ ಜಾತ್ರೆ, ಹಬ್ಬ ಹಾಗೂ ಇತರೆ ಸಂದರ್ಭಗಳಲ್ಲಿ ಹಿಂದೂಯೇತರರಿಗೆ ವ್ಯಾಪಾರ ವಹಿವಾಟು ನಡೆಸಲು ನಿರ್ಬಂಧಿಸಲಾಗಿದೆ. ಹಣ್ಣಿನ ವ್ಯಾಪಾರ ಮಾಡಿಕೊಂಡು ಜೀವನ ನಡೆಸಲು ಅವಕಾಶ ಕೇಳುತ್ತಿದ್ದೇವೆ. ಸರ್ಕಾರ ಕರುಣೆ ತೋರಿಸಬೇಕು ಎಂದು ಹೇಳಿದರು. ಅದಕ್ಕೆ ಸ್ಪಷ್ಟನೆ ನೀಡಿದ ಸಚಿವರು, ಸರ್ಕಾರ (3ನೇ ಪುಟಕ್ಕೆ)

## ಸೈಕಲ್ ಏರಿದ ಅಧಿಕಾರಿಗಳ ತಂಡ



**ಕ್ಷಯರೋಗ ನಿರ್ಮೂಲನಾ ಜನಜಾಗೃತಿ**

ದಾವಣಗೆರೆ, ಮಾ.24- ವಿಶ್ವ ಕ್ಷಯ ರೋಗ ದಿನದ ಪ್ರಯುಕ್ತ ಜಿಲ್ಲಾಧಿಕಾರಿ, ಜಿಲ್ಲಾ ಆರೋಗ್ಯಾಧಿಕಾರಿ, ಕ್ಷಯರೋಗ ನಿರ್ಮೂಲನಾ ಕೇಂದ್ರದ ಅಧಿಕಾರಿಗಳ ತಂಡವು ಸೈಕಲ್ ಏರಿ ನಗರದ ಪ್ರಮುಖ ರಸ್ತೆಗಳಲ್ಲಿ ಸಂಚರಿಸಿತು.

ಆ ಮೂಲಕ ಸಾರ್ವಜನಿಕರನ್ನು ತಮ್ಮತ್ತ ಸೆಳೆದು ಕ್ಷಯರೋಗವನ್ನೋಡಿಸೋಣ, ಆದರೆ ಕ್ಷಯ ರೋಗಿಗಳನ್ನು ದೂರವಿಡುವುದು ಬೇಡ, ಕ್ಷಯ ರೋಗ ಮುಕ್ತ ದಾವಣಗೆರೆ, ಭಾರತವನ್ನಾಗಿಸೋಣ ಎಂಬಿತ್ಯಾದಿ ಘೋಷ ವಾಕ್ಯಗಳ ಮೊಳಗಿಸುತ್ತಾ ಕ್ಷಯ ರೋಗ ನಿರ್ಮೂಲನೆಗೆ ಕರೆ ನೀಡುತ್ತಾ ಜನಜಾಗೃತಿ ಮೂಡಿಸಿದರು.

ಜಿಲ್ಲಾಡಳಿತ, ಜಿಲ್ಲಾ ಪಂಚಾಯತ್, ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಇಲಾಖೆ, ಜಿಲ್ಲಾ ಕ್ಷಯರೋಗ ನಿರ್ಮೂಲನಾ ಕೇಂದ್ರ ಇವುಗಳ ಸಂಯುಕ್ತಾಶ್ರಯದಲ್ಲಿ ಇಂದು ನಗರದ ನಿಜಲಿಂಗಪ್ಪ ಬಡಾವಣೆಯಲ್ಲಿರುವ (3ನೇ ಪುಟಕ್ಕೆ)

# ಭಾರತ ವಿಶ್ವಗುರುವಾಗಲು ಕರ್ತವ್ಯ ಪಾಲಿಸಿ

### ದಾವಣಗೆರೆ ವಿ.ವಿ. ಘಟಿಕೋತ್ಸವದಲ್ಲಿ ಯುವ ಜನತೆಗೆ ರಾಜ್ಯಪಾಲ ಗೆಹ್ಲೋಟ್ ಕರೆ

ದಾವಣಗೆರೆ, ಮಾ. 24 - ವಸುದೈವ ಕುಟುಂಬ ಹಾಗೂ ಸರ್ವೇ ಜನ ಸುಖಿನೋ ಭವಂತು ಎಂಬ ವಿಚಾರಧಾರೆ ಹೊಂದಿರುವ ಭಾರತ, 21ನೇ ಶತಮಾನದಲ್ಲಿ ವಿಶ್ವ ಗುರು - ವಿಶ್ವದ ಮುಕುಟವಾಗಲು ಯುವ ಪೀಳಿಗೆ ಶ್ರಮಿಸಬೇಕು ಎಂದು ರಾಜ್ಯಪಾಲ ಥಾವರ್ ಚಂದ್ ಗೆಹ್ಲೋಟ್ ಕರೆ ನೀಡಿದ್ದಾರೆ.

ದಾವಣಗೆರೆ ವಿಶ್ವವಿದ್ಯಾನಿಲಯದ 9ನೇ ಘಟಿಕೋತ್ಸವ ಸಮಾರಂಭದ ಅಧ್ಯಕ್ಷತೆ ವಹಿಸಿ ಮಾತನಾಡುತ್ತಿದ್ದ ಅವರು, ಭಾರತವು ವಿಶ್ವ ಶಾಂತಿ ಹಾಗೂ ವಿಶ್ವ ಕಲ್ಯಾಣ ದೃಷ್ಟಿಯಿಂದ ಪರಿಶ್ರಮಿಸಲಿದೆ ಎಂದು ಹಲವು ದೇಶಗಳು ನಿರೀಕ್ಷೆ ಇಟ್ಟುಕೊಂಡಿವೆ. ಈ ಅಪೇಕ್ಷೆ ಈಡೇರಿಸಲು ಯುವಕರು ಸಹಭಾಗಿ ಆಗಬೇಕು ಎಂದು ಹೇಳಿದರು.

21ನೇ ಶತಮಾನ ಭಾರತದ ಶತಮಾನ ಎಂದು ನಮ್ಮ ಹಿಂದಿನವರು ಹೇಳಿದ್ದಾರೆ. ಸ್ವಲ್ಪ ಕಷ್ಟಗಳು ಎದುರಾದರೂ, ಅವರ ಆಶಯದಂತೆ ನಾವು ಸಾಗಬೇಕಿದೆ. ಪದವಿ ಪಡೆದಿರುವ ವಿದ್ಯಾರ್ಥಿಗಳು ಮುಂದೆ ಯಾವುದೇ ಕ್ಷೇತ್ರದಲ್ಲಿ ಕೆಲಸ ಮಾಡಿದರೂ ಇದೇ ವಿಚಾರ ಹೊಂದಿರಲಿ ಎಂದವರು ಕಿವಿಮಾತು ಹೇಳಿದರು.

ಸಂವಿಧಾನದಲ್ಲಿನ ಹಕ್ಕುಗಳನ್ನು ಪಡೆಯಲು ಬಹಳ ಜನ ಶ್ರಮಿಸುತ್ತಾರೆ. ನಾನು, ಕುಟುಂಬ ಹಾಗೂ ಸಮಾಜ ಎಂದೇ ಸೀಮಿತವಾಗುತ್ತಾರೆ. ಇದನ್ನು ಮೀರಿ ದೇಶದ ಬಗ್ಗೆ ಹೊಂದಿರುವ ಕರ್ತವ್ಯಗಳನ್ನೂ ಪಾಲಿಸಬೇಕು ಎಂದು ರಾಜ್ಯಪಾಲರು ಹೇಳಿದರು.

ಘಟಿಕೋತ್ಸವ ಭಾಷಣ ಮಾಡಿದ ಒರಿಸ್ಸಾ ಕೇಂದ್ರೀಯ ವಿಶ್ವವಿದ್ಯಾನಿಲಯದ ಮಾಜಿ ಕುಲಾಧಿಪತಿ ಡಾ. ಪಿ.ವಿ. ಕೃಷ್ಣ ಭಟ್, ವಿಜ್ಞಾನ ಮತ್ತು ತಂತ್ರಜ್ಞಾನಗಳು ಎರಡಲುಗಿನ ಕತ್ತಿ. ಅವು ದುಷ್ಟ (2ನೇ ಪುಟಕ್ಕೆ)



ವಿ.ಎಂ. ಶಶಿಕುಮಾರ್, ಡಾ. ಮೀರಾಸಾಬಿಹಳ್ಳಿ ಶಿವಣ್ಣ, ಲಕ್ಷ್ಮಣ ಎಸ್. ತೆಲಗಾವಿ ಅವರಿಗೆ ಗೌರವ ಡಾಕ್ಟರೇಟ್ ಪ್ರದಾನ ಮಾಡಲಾಯಿತು.

## ಘಟಿಕೋತ್ಸವದಲ್ಲಿ ಚಿನ್ನ ಪಡೆದವರ ಸಂತಸ

ದಾವಣಗೆರೆ, ಮಾ. 24- ದಾವಣಗೆರೆ ವಿಶ್ವವಿದ್ಯಾಲಯದಲ್ಲಿಂದು ನಡೆದ ಘಟಿಕೋತ್ಸವದಲ್ಲಿ ರ‍್ಯಾಂಕ್ ಪಡೆದು, ಚಿನ್ನ ಪಡೆದ ವಿದ್ಯಾರ್ಥಿಗಳ ಸಂತಸ ಹಿಮ್ಮಡಿಸಿತ್ತು. ಪೋಷಕರೂ ತಮ್ಮ ಮಕ್ಕಳ ಸಾಧನೆಯ ಸಂತಸದಲ್ಲಿ ಪಾಲ್ಗೊಂಡಿದ್ದರು.

ಸ್ನಾತಕ ಪದವಿಯಲ್ಲಿ 6 ಪುರುಷ, 7 ಮಹಿಳೆಯರು ಸೇರಿ 13 ವಿದ್ಯಾರ್ಥಿಗಳು 21 ಸ್ವರ್ಣ ಪದಕಗಳನ್ನು ಪಡೆದರೆ, ಸ್ನಾತಕೋತ್ತರ ಪದವಿಯಯಲ್ಲಿ 6 ಪುರುಷ, ಹಾಗೂ 25 ಮಹಿಳಾ ವಿದ್ಯಾರ್ಥಿಗಳು ಸೇರಿ 31 ವಿದ್ಯಾರ್ಥಿಗಳು 58 ಸ್ವರ್ಣ ಪದಕಗಳನ್ನು ಪಡೆದರು. ಒಟ್ಟಾರೆಯಾಗಿ 44 ವಿದ್ಯಾರ್ಥಿಗಳು 79 ಚಿನ್ನದ ಪದಕಗಳನ್ನು ಹಂಚಿಕೊಂಡರು.

ಪದಕ ಪಡೆಯುವ ಹಾದಿ ಹಲವಾರು ವಿದ್ಯಾರ್ಥಿಗಳಿಗೆ ಸುಲಭವಾಗಿರಲಿಲ್ಲ. ಕಠಿಣ ಹಾದಿಯನ್ನೇ ಸವೆಸಿದ್ದರು. ಪೋಷಕರು ತಮ್ಮ ಮಕ್ಕಳ ಸಾಧನೆಗೆ ಭಾವುಕರಾಗಿದ್ದರು. ಪದಕ ಪಡೆಯುವ ವೇಳೆ ಕೆಲ ಪೋಷಕರ ಕಣ್ಣಂಚಿನಲ್ಲಿ ನೀರು ತುಂಬಿಕೊಂಡಿತ್ತು.



ಗಾರೆ ಕೆಲಸ ಮಾಡುತ್ತಲೇ ಓದಿದ ಕಥೆ ಒಬ್ಬರಾದರೆ, ಅಪ್ಪನ ಜೊತೆ ಜಮೀನಿನಲ್ಲಿ ಸಹಕರಿಸುತ್ತಲೇ ಓದಿ (4ನೇ ಪುಟಕ್ಕೆ)

### ನವೀನ್ ಪೋಷಕರಿಗೆ ರಾಜ್ಯಪಾಲರಿಂದ ಸಾಂತ್ವನ

ವಿವರ 3ನೇ ಪುಟದಲ್ಲಿ...

## ಪರೀಕ್ಷೆಗೂ-ಹಿಜಾಬ್‌ಗೂ ಯಾವುದೇ ಸಂಬಂಧ ಇಲ್ಲ


### ಅರ್ಜಿಯ ತ್ವರಿತ ವಿಚಾರಣೆಗೆ ಸುಪ್ರೀಂ ನಕಾರ

ನವದೆಹಲಿ, ಮಾ. 24 - ಶಾಲಾ ಕೋಣೆಯೊಳಗೆ ಹಿಜಾಬ್ ಧರಿಸಲು ಅವಕಾಶ ನೀಡಲಾಗದು ಎಂದು ಹೈಕೋರ್ಟ್ ನೀಡಿರುವ ತೀರ್ಪು ಪ್ರಶ್ನಿಸಿ ದಾಖಲಾಗಿರುವ ಅರ್ಜಿಯನ್ನು ತ್ವರಿತ ವಿಚಾರಣೆಗೆ ಒಳಪಡಿಸಲು ಸುಪ್ರೀಂ ಕೋರ್ಟ್ ನಿರಾಕರಿಸಿದೆ.

ಮುಖ್ಯ ನ್ಯಾಯಮೂರ್ತಿ ಎನ್.ವಿ. ರಮಣ ಹಾಗೂ ನ್ಯಾಯಮೂರ್ತಿ ಕೃಷ್ಣ ಮುರಾರಿ ಅವರನ್ನು ಒಳಗೊಂಡ ಪೀಠದ ಎದುರು ಹಾಜರಾಗಿದ್ದ ಹಿರಿಯ ವಕೀಲ ದೇವದತ್ ಕಾಮತ್, ಪರೀಕ್ಷೆಗಳು ನಡೆಯುತ್ತಿರುವ ಹಿನ್ನೆಲೆಯಲ್ಲಿ ತ್ವರಿತವಾಗಿ ವಿಚಾರಣೆ ನಡೆಸಬೇಕೆಂದು (2ನೇ ಪುಟಕ್ಕೆ)

## 70ರ ಮೇಲ್ಪಟ್ಟ ನಿವೃತ್ತ ನೌಕರರ ಪಿಂಚಣಿ ಹೆಚ್ಚಳಕ್ಕೆ ಪರಿಶೀಲನೆ

ಬೆಂಗಳೂರು, ಮಾ. 24 - ಎಪ್ಪತ್ತು ವರ್ಷ ಮೇಲ್ಪಟ್ಟ ನಿವೃತ್ತ ಸರ್ಕಾರಿ ನೌಕರರ ಪಿಂಚಣಿ ಹೆಚ್ಚಳ ಮಾಡಲು ಏಳನೇ ವೇತನ ಆಯೋಗದ ಅಧ್ಯಯನದ ವೇಳೆ ಪರಿಶೀಲನೆ ನಡೆಸಲಾಗುವುದು ಎಂದು ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ ವಿಧಾನ ಪರಿಷತ್‌ನಲ್ಲಿಂದು ಭರವಸೆ ನೀಡಿದ್ದಾರೆ. ಪ್ರಶ್ನೋತ್ತರ ಅವಧಿಯಲ್ಲಿ ಆಯನೂರು ಮಂಜುನಾಥ್ (2ನೇ ಪುಟಕ್ಕೆ)



## ಗ್ರಾ.ಪಂ. ಮಟ್ಟಕ್ಕೆ ಮಾದರಿ ಶಾಲೆ

ಬೆಂಗಳೂರು, ಮಾ. 24 - ಹೋಬಳಿ ಮಟ್ಟದ ಮಾದರಿ ಶಾಲೆಗಳನ್ನು ಗ್ರಾಮ ಪಂಚಾಯತ್ ಮಟ್ಟಕ್ಕೂ ಕೊಂಡೊಯ್ಯುವ ಚಿಂತನೆ ಇದೆ ಎಂದು ಶಿಕ್ಷಣ ಸಚಿವ ಬಿ.ಸಿ.ನಾಗೇಶ್ ವಿಧಾನಸಭೆಗೆ ತಿಳಿಸಿದ್ದಾರೆ.

ಪ್ರಶ್ನೋತ್ತರ ವೇಳೆಯಲ್ಲಿ ಅನ್ನದಾನಿ ಅವರ ಪ್ರಸ್ತಾವಕ್ಕೆ ಉತ್ತರಿಸಿದ ಸಚಿವರು, ಕರ್ನಾಟಕ ಪಬ್ಲಿಕ್ ಶಾಲೆಗಳು ದೆಹಲಿ ಶಾಲೆಗಳಿಗಿಂತ ಉತ್ತಮವಾಗಿವೆ. ಮಾದರಿ ಶಾಲೆಗಳನ್ನು ಇನ್ನಷ್ಟು ಸುಧಾರಣೆ ಮಾಡಬೇಕೆಂಬ ಉದ್ದೇಶದಿಂದ ಶೈಕ್ಷಣಿಕ (3ನೇ ಪುಟಕ್ಕೆ)







**ಕೆಲಸಕ್ಕೆ ಬೇಕಾಗಿದ್ದಾರೆ**
ನಿರ್‌ವಿನ್ಸ್ ಕೆಫೆ ಯಲ್ಲಿ ಕೆಲಸ ಮಾಡಲು ಉತ್ಸಾಹಿ ಯುವಕ ಯುವತಿಯರು ಬೇಕಾಗಿದ್ದಾರೆ. ವಯಸ್ಸು - 18 To 30 ಬೇಕರಿಯಲ್ಲಿ ಕೆಲಸ ಮಾಡಿದವರಿಗೆ ಹೆಚ್ಚಿನ ಆದ್ಯತೆ ನೀಡಲಾಗುವುದು.
Quali : ಪಿಯುಸಿ ಪಾಸ್ / ಫೇಲ್
93804 69079

**ಸೈಟು ಮಾರಾಟಕ್ಕೆ (KHB)**
ಕರ್ನಾಟಕ ಗೃಹ ಮಂಡಳಿಯಲ್ಲಿ 40x60 ಪೂರ್ವ, 30x50 ದಕ್ಷಿಣ, 30x60 ಉತ್ತರ, 30x40 ಪಶ್ಚಿಮ, 56x78 ಉತ್ತರ ಪೂರ್ವ ಕಾರ್ನರ್ 30x50 ಪೂರ್ವ ಡಬಲ್ ರೋಡ್‌ಗೆ
ಬೂಸ್ನೂರ್ ಕಿರಣ್ (ಏಜೆಂಟ್)
98440 63409, 97315 63409
ಫೋನ್ ಮಾಡುವ ಸಮಯ: ಬೆಳಿಗ್ಗೆ 11 ರಿಂದ 2, ಮಧ್ಯಾಹ್ನ 4 ರಿಂದ 6. ಅರ್ಜೆಂಟ್ ಮಾಡುವವರಿಗೆ ಸೈಟು ತೋರಿಸುವುದಿಲ್ಲ.

**ಸೈಟುಗಳು ಮಾರಾಟಕ್ಕಿವೆ**
ಹೊಸ ಬನಶಂಕರಿ ಬಡಾವಣೆಯಲ್ಲಿ 30x74 ಪೂರ್ವ, 30x45 ಪಶ್ಚಿಮ 30x50 ಪೂರ್ವ-ದಕ್ಷಿಣ ಕಾರ್ನರ್ ಬಾಲಾಜಿ ಬಡಾವಣೆಯಲ್ಲಿ 30x55 ಉತ್ತರ-ಪೂರ್ವ ಕಾರ್ನರ್. ನಿಜಲಿಂಗಪ್ಪ ಬಡಾವಣೆಯಲ್ಲಿ 30x30 ಪಶ್ಚಿಮ.
ಸ್ವಾಮಿ ಏಜೆಂಟ್ ವಿದ್ಯಾನಗರ
97421 44715

**ಬೇಕಾಗಿದ್ದಾರೆ**
ಪೆಟ್ರೋಲ್ ಬಂಕ್‌ನಲ್ಲಿ ಪೆಟ್ರೋಲ್ ಹಾಕಲು ಹುಡುಗರು ಬೇಕಾಗಿದ್ದಾರೆ.
ತಕ್ಷಣ ಸಂಪರ್ಕಿಸಿ :
73491 56380

**ಸೈಟುಗಳು ಮಾರಾಟಕ್ಕಿವೆ**
1) 65x147 East ಗ್ಲಾಸ್ ಹೌಸ್ ಹತ್ತಿರ 2) 70x63 Corner, ಡಾಲರ್ಸ್ ಕಾಲೋನಿಯಲ್ಲಿ. 3) 40x60 West ವಿವೇಕಾನಂದ ಬಡಾವಣೆ
ಐನಳ್ಳಿ ಚನ್ನಬಸಪ್ಪ ಏಜೆಂಟ್
99166 12110

**ನೆಲ ಮಳಿಗೆ ಬಾಡಿಗೆಗೆ ಇದೆ**
ಕೆ.ಟಿ.ಜೆ ನಗರದ 8ನೇ ಕ್ರಾಸ್‌ನಲ್ಲಿ 1600 ಚದರಡಿಯುಳ್ಳ ನೆಲ ಮಳಿಗೆಯು ಕಚೇರಿ ಅಥವಾ ಇನ್ನಿತರೆ ವಾಣಿಜ್ಯೋಪಯೋಗಕ್ಕೆ ಬಾಡಿಗೆಗಿದೆ.
ಸಂಪರ್ಕಿಸಿ: 94484-78786
98867-34802

**ಮನೆ ಲೀಸ್‌ಗೆಇದೆ**
ಎಂ.ಸಿ.ಸಿ 'A' ಬ್ಲಾಕ್, ಆಶ್ರಯ ಆಸ್ಪತ್ರೆ ಹತ್ತಿರ, 2 ಬೆಡ್ ರೂಂ, ಮುನ್ಸಿಪಲ್ ನೀರಿನ ಸೌಕರ್ಯ ಇರುವ RCC ಮನೆ ಲೀಸ್‌ಗೆ ಇದೆ.
94482 33372

**ಮನೆಗಳು ಮಾರಾಟಕ್ಕಿವೆ**
ಶಿವ ಪಾರ್ವತಿ ಉತ್ತರ 30x46, ಕೆಳಗೆ 2BHK ಮೇಲೆ ಸಿಂಗಲ್ BHK, ಬಸವೇಶ್ವರ ಬಡಾವಣೆ ಪೂರ್ವ ಕೆಳಗೆ 2BHK ಮೇಲೆ 2BHK ಅದರ ಮೇಲೆ ಸಿಂಗಲ್ ರೂಂ, ಮಹಾಲಕ್ಷ್ಮಿ ಬಡಾವಣೆ (ಕಾವೇರಿ ಅಪಾರ್ಟ್‌ಮೆಂಟ್ ಹತ್ತಿರ) ಉತ್ತರ 30x50 ಡುಪ್ಲೆಕ್ಸ್. ಸೈಟುಗಳು ಮತ್ತು ಮನೆಗಳಿಗೆ ಬ್ಯಾಂಕ್ ಲೋನ್ ಮಾಡಿಸಿಕೊಡಲಾಗುತ್ತದೆ.
ಐಗೂರು ವಿಜಯಕುಮಾರ
99457 02495

**ಮನೆ ಬಾಡಿಗೆಗೆ ಇದೆ**
2BHK ಮೊದಲನೇ ಮಹಡಿ, ಬೋರ್‌ವೆಲ್ & ಕಾರ್ಪೊರೇಷನ್ ನೀರಿನ ವ್ಯವಸ್ಥೆಯಿರುವ ಮನೆ ದೇವರಾಜ ಅರಸ್ ಬಡಾವಣೆ 'ಬಿ' ಬ್ಲಾಕ್ 1ನೇ ಮುಖ್ಯರಸ್ತೆ, 11ನೇ ಕ್ರಾಸ್ ನಂ 353 'ಸಿರಿಸಾರ' ಉತ್ತರ ದಿಕ್ಕಿಗೆ ಬಾಗಿಲಿರುವ ಮನೆ ಬಾಡಿಗೆಗೆ ದೊರೆಯುತ್ತದೆ. ವಿಚಾರಿಸಿ
94489 63300

**ಮಳಿಗೆ ಬಾಡಿಗೆಗೆ/ಲೀಸ್ ಗಿದೆ**
40 ಫೀಟ್ ರೋಡ್, ಡಿಸಿಎಂ ಹಿಂಭಾಗ, ಎಸ್. ಎಸ್. ಹಾಸ್ಪಿಟಲ್ ರೋಡ್, ಶಕ್ತಿ ನಗರ ಸರ್ಕಲ್, ದಾವಣಗೆರೆ ಇಲ್ಲಿ 30x60 ಪೂರ್ವ ಫೇಸ್‌ವುಳ್ಳ ಮಳಿಗೆ ಬಾಡಿಗೆಗೆ / ಲೀಸ್ ಗಿದೆ . ಸಂಪರ್ಕಿಸಿ:
99161 79135
90080 30330

**ಗೋಡೌನ್ ಬಾಡಿಗೆಗೆ ಇದೆ ವಿಚಾರಿಸಿ**
(A.P.M.C) ಎ.ಪಿ.ಎಂ.ಸಿ ಯಾರ್ಡ್‌ನಲ್ಲಿ 4700 Sq. Ft. ಬಾಡಿಗೆಗೆ ಇದೆ.
ಬಿ.ಎಸ್. ಪ್ರಕಾಶ್
ಫೋ: 94481 15256

**ಸೈಟುಗಳು ಮಾರಾಟಕ್ಕಿವೆ**
ಗ್ಲಾಸ್ ಹೌಸ್ ಹತ್ತಿರ ಅಪಾರ್ಟ್‌ಮೆಂಟ್ ಕಟ್ಟಲಿಕ್ಕೆ ಉತ್ತರ-ದಕ್ಷಿಣ ಹಿಂದೆ-ಮುಂದೆ ರಸ್ತೆ 65x412 ಮತ್ತು ಪೂರ್ವ 65x150, (ರಿಂಗ್ ರೋಡ್ ಪಕ್ಕ), 45x48, 39x52, ಉತ್ತರ 30x40, ಪಶ್ಚಿಮ 30x50, 30x40 ಸೈಟುಗಳು ಮತ್ತು ಮನೆಗಳು ಮಾರಾಟಕ್ಕೆ ಹಾಗೂ ಖರೀದಿಗೆ ಹಾಗೂ ಬ್ಯಾಂಕ್ ಲೋನ್ ಮಾಡಿಸಿಕೊಡಲಾಗುತ್ತದೆ.
ಐಗೂರು ವಿಜಯಕುಮಾರ
99457 02495

**ಮನೆ ಬಾಡಿಗೆಗಿವೆ**
ಶಾಮನೂರು ಪಕ್ಕ ಡಾಲರ್ಸ್ ಕಾಲೋನಿಯಲ್ಲಿ ಶಿವ ಸದನ ತಿಮ್ಮಾರೆಡ್ಡಿ ಹೈಸ್ಕೂಲ್ ಹತ್ತಿರ 1BHK, 2BHK ಮನೆ ಬಾಡಿಗೆಗೆ ಇವೆ. ಲಿಫ್ಟ್ ವ್ಯವಸ್ಥೆ ಇದೆ. ಸಂಪರ್ಕಿಸಿ
87623 12789
99722 44667

**ಸೈಟುಗಳು ಮಾರಾಟಕ್ಕಿವೆ**
40x50, 45x50 ತರಳಬಾಳು ಬಡಾವಣೆ 70x35 SS B ಪೂರ್ವ 30x70 ಸಿದ್ದವೀರಪ್ಪ ಬಡಾವಣೆ
97418 11694

**ಬೇಕಾಗಿದ್ದಾರೆ**
ದಾವಣಗೆರೆಯಲ್ಲಿರುವ ಪೆಟ್ರೋಲ್ ಬಂಕ್ ನಲ್ಲಿ ಕೆಲಸ ಮಾಡಲು ಹುಡುಗರು ಬೇಕಾಗಿದ್ದಾರೆ.
70185 88900
95388 70257

**ಹಿಟ್ಟಿನ ಗಿರಣಿ ಬಾಡಿಗೆಗಿದೆ**
ವಿದ್ಯಾನಗರ, ವಿನಾಯಕ ಬಡಾವಣೆ, 20 ನೇ ಕ್ರಾಸ್‌ನಲ್ಲಿರುವ 24 K.V ವಿದ್ಯುತ್ ಸಂಪರ್ಕವಿರುವ ರಾಗಿ, ಜೋಳ, ಗೋದಿ, ಕಾರಪುಡಿ, ಸಂಬಾರ್ ಪುಡಿ ಬೀಸುವ ಸುಸಜ್ಜಿತವಾದ ಗಿರಣಿ. 100 ಕ್ವಿಂಟಾಲ್ ಗೋಡೌನ್ ವ್ಯವಸ್ಥೆ ಇದೆ.
98441 91743,99161 06139

**ಬೇಕಾಗಿದ್ದಾರೆ**
"Finance company" Manager-1, Assistant manager-1, Tele caller-2, Field officer-1, Office assistant-2, ಹುದ್ದೆಗೆ minimum 2 years experience ಹೊಂದಿರುವ ಯುವಕ, ಯುವತಿಯರು ಬೇಕಾಗಿದ್ದಾರೆ. (Salary 20k to 35k)
ಆಸಕ್ತರು ಕೂಡಲೇ ಸಂಪರ್ಕಿಸಿ :
9739294066

**ತಕ್ಷಣ ಬೇಕಾಗಿದ್ದಾರೆ**
ಕೋರಿಯರ್ ಆಫೀಸ್ ನಲ್ಲಿ ಕೆಲಸ ಮಾಡಲು ಡ್ರೈವರ್ ಬೇಕಾಗಿದ್ದಾರೆ. ಇಂಗ್ಲಿಷ್ ಓದಲು ಮತ್ತು ಬರೆಯಲು ಬರಬೇಕು. ಆಸಕ್ತಿ ಇದ್ದಲ್ಲಿ ಮೂಲ ದಾಖಲಾತಿಯೊಂದಿಗೆ ಸಂಪರ್ಕಿಸಿ:
Call 9880042597, 8971119130
Whatsapp 70199 83025

**ಬೇಕಾಗಿದ್ದಾರೆ**
ಮೆಡಿಹೌಸ್ ಔಷಧಿ ಅಂಗಡಿಯಲ್ಲಿ ಕೆಲಸ ಮಾಡಲು ಹುಡುಗರು ಮತ್ತು ಹುಡುಗಿಯರು ಬೇಕಾಗಿದ್ದಾರೆ.
PUC or any degree,
ವಿಳಾಸ : ಕಾವೇರಿ ಫಾರ್ಮ, ಚೇತನಾ ಹೋಟೆಲ್ ಹತ್ತಿರ, ದಾವಣಗೆರೆ- 577002.

**ಮನೆ ಬಾಡಿಗೆಗೆ ಇದೆ**
2BHK ನೆಲಮಹಡಿ ಮನೆ ಬಾಡಿಗೆಗೆ ಇದೆ. ಸಸ್ಯಹಾರಿಗಳಿಗೆ ಮಾತ್ರ. ಕುವೆಂಪು ನಗರ, ಎಂಸಿಸಿ 'B' ಬ್ಲಾಕ್, ಎಸ್.ಎಸ್ ಮಾಲ್ ಹತ್ತಿರ. ಕಾರ್ಪೊರೇಷನ್ ವಾಟರ್, ಬೋರ್‌ವೆಲ್, ಸೋಲಾರ್ ಮತ್ತು ಕಾರ್ ಪಾರ್ಕಿಂಗ್ ಇದೆ.
ಸಂಪರ್ಕಿಸಿ : 97421 57455

**ಬೇಕಾಗಿದ್ದಾರೆ**
ಶ್ರೀ ಅನ್ನಪೂರ್ಣೇಶ್ವರಿ ದೇವಸ್ಥಾನಕ್ಕೆ ಅರ್ಚಕರು, ಮ್ಯಾನೇಜರ್ ಮತ್ತು ದೇವಸ್ಥಾನದ ಕೆಲಸಕ್ಕೆ ಮಹಿಳೆ ಬೇಕಾಗಿದ್ದಾರೆ. ಸಂಪರ್ಕಿಸಿ:
63639 54459
98863 20025

**ಬೇಕಾಗಿದ್ದಾರೆ**
ಬಿನ್ನಿ ಕಂಪನಿ ರೋಡ್‌ನಲ್ಲಿರುವ ಮನೆಗೆ ಮಹಿಳಾ ಮನೆ ಕೆಲಸದವರು ಬೇಕಾಗಿದ್ದಾರೆ.
63631 97523

**ಮನೆ ಮಾರಾಟಕ್ಕಿದೆ**
ಸಿದ್ಧವೀರಪ್ಪ ಬಡಾವಣೆ, 10ನೇ ಕ್ರಾಸ್. ನಂ. 1935/7, 44x60 ಅಳತೆಯಲ್ಲಿ 6 ಬೆಡ್ ರೂಂ ಡೂಪ್ಲೆಕ್ಸ್ ಮನೆ ಮಾರಾಟಕ್ಕಿದೆ.
99007 00091

**ಹೊಸ ಬಿಲ್ಡಿಂಗ್ ಮಾರಾಟಕ್ಕೆ**
3 ಮನೆ, 2 ಮಳಿಗೆಗಳುಳ್ಳ 3 ಅಂತಸ್ತಿನ ಬಿಲ್ಡಿಂಗ್ (ಕಾರ್ನರ್ ಸೈಟ್ 30x30) ನಿಜಲಿಂಗಪ್ಪ ಲೇ ಔಟ್‌ನಲ್ಲಿ ಮಾರಾಟಕ್ಕಿದೆ. ಸಂಪರ್ಕಿಸಿ :
90088 78676

**ಬೇಕಾಗಿದ್ದಾರೆ**
5 ವರ್ಷ GST, IT & Tally ಅನುಭವವಿರುವ (ಬಿಕಾಂ) ಅಕೌಂಟೆಂಟ್, ಹುದ್ದೆ ಖಾಲಿ ಇದೆ. ವೇತನ ರೂ. 12-15 ಸಾವಿರ. ಆಸಕ್ತ ಪುರುಷರು
ಸಂಪರ್ಕಿಸಿ : 94481 32721
Whatsapp : 85537 97228

**ಸೈಟುಗಳು ಮಾರಾಟಕ್ಕಿವೆ**
ಆವರಗೆರೆ ಲಕ್ಷ್ಮಣ ಲೇಔಟ್‌ನಲ್ಲಿ ಅಲಿನೇಷನ್ ಸೈಟುಗಳು ಮಾರಾಟಕ್ಕಿವೆ. 30x45 North, 30x50 South. ಸಂಪರ್ಕಿಸಿ :
99456 12842
63646 44033

**ಉಚಿತ ಥೆರಪಿ**
15 ದಿನಗಳಲ್ಲಿ ಪರಿಹಾರ ಬಿಪಿ, ಶುಗರ್, ವೆರಿಕೋಸ್ ವೇನ್ ,ಬೆನ್ನು/ಸೊಂಟ/ಮಂಡಿ ನೋವು,ಗ್ಯಾಸ್ಟ್ರಿಕ್, ಇತರೆ ಯಾವುದೇ ಸಮಸ್ಯೆ ಗಳಿಗೆ ನೇರ ಪರಿಹಾರ.HOME DEMO ಸೌಲಭ್ಯ ವಿದೆ.T&C ಕಂಪ್ಯಾನಿಯೋ ಮೆಡಿಟೆಕ್, ಲಾಯರ್ ರೋಡ್ ದಾವಣಗೆರೆ.
86602 35013

**ಸೈಟ್‌ಗಳು ಮಾರಾಟಕ್ಕಿವೆ**
ದಾವಣಗೆರೆ ರಾಮನಗರ, ಎಸ್.ಎಸ್. ಆಸ್ಪತ್ರೆ ಹಿಂಭಾಗದಲ್ಲಿ ಸುಲಭ ಕಂತುಗಳಲ್ಲಿ ಸೈಟುಗಳು ಮಾರಾಟಕ್ಕಿವೆ. (Rs 1,500/-Sqft)
ಹುಲ್ಲುಮನೆ ಪ್ರಾಪರ್ಟೀಸ್ & ಪವರ್ ಲಿಮಿಟೆಡ್
95135 03000

**ಮನೆ ಬಾಡಿಗೆಗೆ ಇದೆ**
# 63, 1st Main, 1st Cross, ನಿಜಲಿಂಗಪ್ಪ ಲೇ ಔಟ್, ದಾವಣಗೆರೆ. ಸಸ್ಯಹಾರಿಗಳು ಮಾತ್ರ.
98455 67223
98808 27928

**ಮನೆ ಬಾಡಿಗೆಗೆ/ ಲೀಸ್‌ಗೆ ಇದೆ**
1 BHK ಮನೆ ದೇವರಾಜ್ ಅರಸ್ ಬಡಾವಣೆ, 'ಸಿ' ಬ್ಲಾಕ್, ದಾವಣಗೆರೆ.
70220 88338

**ಬೆಂಗಳೂರಿನಲ್ಲಿ ಹೌಸ್ ಕೀಪಿಂಗ್ ಹುಡುಗರು ಬೇಕಾಗಿದ್ದಾರೆ**
ಸಂಬಳ 9000, ಊಟ, ರೂಂ ಉಚಿತ
ಸಂಪರ್ಕಿಸಿ :
97400 98064, 97400 98047

**ಸೈಟುಗಳು ಮಾರಾಟಕ್ಕಿವೆ**
ವಿದ್ಯಾನಗರ, ದೇವಿ ಹೊಸ ಬನಶಂಕರಿ ಲೇಔಟ್‌ನಲ್ಲಿ 40x40 East, 30x50 West, 30x50 Corner, 30x50 South, 30x52 East, 60x52 East
ಐನಳ್ಳಿ ಚನ್ನಬಸಪ್ಪ ಏಜೆಂಟ್
99166 12110

**WANTED**
BILLING / STORE SALES
Bolas the Factory Outlet
Dry Fruit Shop
Contact : 99007 08999
94484 54709
Qualification : Any Degree with Computer Knowledge

**REQUIRED**
Civil Engineer
Microbiologist
(Experience of Minimum 5 Years)
Contact : 98441 20003
From : Shamanur Sugars
4th Main, P.J. Extension, Davangere.

**ಬೇಕಾಗಿದ್ದಾರೆ**
ಕಿರಾಣಿ ಅಂಗಡಿಯಲ್ಲಿ ಕೆಲಸ ಮಾಡಲು ಹುಡುಗರು ಬೇಕಾಗಿದ್ದಾರೆ.
83173 43604
87489 10050

**WANTED**
For field work daily 3 to 4 hours. age 18 to 25
99160 41212

**ಬೇಕಾಗಿದ್ದಾರೆ**
Call center - Girls
Accountant - Girls
Field Executive - Boys
Sri Kururvatti Basaveshwara Pharma
College Road, P.J. Extn., Davanagere
95139 15520

**WANTED TEACHER**
Play Group, LKG, UKG with Computer Knowledge
Little Millennium Pre School, Siddaveerappa Layout, Davangere.
Ph. : 83100 69167

**ಬೇಕಾಗಿದ್ದಾರೆ**
ಕಾರ್ ವಾಷ್ ಮಾಡಲು ಹುಡುಗರು ಬೇಕಾಗಿದ್ದಾರೆ.
ಸಂಬಳ : 10,000/-
95352 43598
08192 261003
99161 43003

**ಬೇಕಾಗಿದ್ದಾರೆ**
ರೆಡಿಮೇಡ್ ಬಟ್ಟೆ ಅಂಗಡಿಯಲ್ಲಿ 3 ರಿಂದ 4 ವರ್ಷ ಅನುಭವವುಳ್ಳ ಸೇಲ್ಸ್ ಗರ್ಲ್ಸ್ ಬೇಕಾಗಿದ್ದಾರೆ.
ಸಂಬಳ : 10000-12000
ಶ್ರೀ ಗಣೇಶ ಹೊಸೈರಿ ಮಾರ್ಟ್,
19, ಮಹಿಳಾ ಸಮಾಜ ಕಾಂಪ್ಲೆಕ್ಸ್, ಅಶೋಕ ರಸ್ತೆ, ದಾವಣಗೆರೆ.
94482 07473

**ಬೇಕಾಗಿದ್ದಾರೆ**
ಫರ್ನೀಚರ್ ಫ್ಯಾಕ್ಟರಿಯಲ್ಲಿ ಕೆಲಸ ಮಾಡಲು ಹುಡುಗರು ಬೇಕಾಗಿದ್ದಾರೆ. ವಯೋಮಿತಿ 21 ರಿಂದ 28. ಸ್ಥಳ ದಾವಣಗೆರೆ.
M : 86182 60719

**ಸೊಳ್ಳೆ ಮೆಶ್ ಹಾಕಲಾಗುವುದು**
ನಮ್ಮಲ್ಲಿ ಎಲ್ಲಾ ತರಹದ ಕುಷನ್ ವರ್ಕ್ಸ್, ಸೋಫಾ ಸೆಟ್, Duroflex Bed, ಕಿಟಕಿಗೆ ಅಲ್ಯೂಮಿನಿಯಂ ಡೋರ್, ಸೊಳ್ಳೆ ಮೆಶ್ ಹಾಕಲಾಗುವುದು
Swapna Cushion Work
Behind Vittal Temple, Maharaj Pet, Davanagere
98445 81966

**WANTED**
WORKING PHARMACIST
Qualification : D. Pharma/B. Pharma, Age Below 30 Years, Salary Scale : Rs.12000 to 16000
ಕಾವೇರಿ ಮೆಡಿಹೌಸ್ ಪ್ರೈ, ಲಿ.,
ಚೇತನಾ ಹೋಟೆಲ್ ಹತ್ತಿರ, ದಾವಣಗೆರೆ-2.

**ಬೇಕಾಗಿದ್ದಾರೆ**
ಲಾಡ್ಜ್‌ನಲ್ಲಿ ಹಗಲು ಪಾಳೆಯದಲ್ಲಿ ರೂಂ ಬಾಯ್ ಕೆಲಸಕ್ಕೆ ಬೇಕಾಗಿದ್ದಾರೆ. ಊಟ, ವಸತಿ ಸೌಲಭ್ಯವಿರುತ್ತದೆ.
63639 54459


## ನೇತ್ರದಾನಿ ಜಿ.ಎ. ಬಸವಲಿಂಗಪ್ಪ ನಿಧನ



ಎಂ.ಸಿ.ಸಿ. 'ಎ' ಬ್ಲಾಕ್, 5ನೇ ಮೇನ್, 5ನೇ ಕ್ರಾಸ್ ವಾಸಿ ದಿ. ಗೌಡರ ಅಜ್ಜಪ್ಪನವರ ಪುತ್ರ **ಜಿ.ಎ. ಬಸವಲಿಂಗಪ್ಪ** (48) ಅವರು ದಿನಾಂಕ 24.03.2022 ರ ಗುರುವಾರ ಸಂಜೆ 4.45ಕ್ಕೆ ವಿಧಿವಶರಾದರು. ಪತ್ನಿ, ಓರ್ವ ಪುತ್ರ ಹಾಗೂ ಅಪಾರ ಬಂಧುಗಳನ್ನು ಅಗಲಿರುವ ಮೃತರ ಅಂತ್ಯ ಕ್ರಿಯೆಯು ದಿನಾಂಕ 25.03.2022 ರ ಶುಕ್ರವಾರ ಮಧ್ಯಾಹ್ನ 12.30ಕ್ಕೆ ಗಾಂಧಿ ನಗರದ ವೀರಶೈವ ರುದ್ರಭೂಮಿಯಲ್ಲಿ ನೆರವೇರಲಿದೆ.

**ದುಃಖತಪ್ತರು : ಪತ್ನಿ ಗೀತಾ ಬಿ. ಗೌಡರ್, ಮಗ ಮಯಾಂಕ್ ಗೌಡರ್, ಗೌಡ್ರ ವಂಶಸ್ಥರು.**


**SUMMER CAMP SBS NADIGER**
Essential English Coaching Centre
ಹೊಸ ಬ್ಯಾಚುಗಳ ಪ್ರಾರಂಭ
VI-X- ಬೆಳಿಗ್ಗೆ 7-8
III - VI ಬೆಳಿಗ್ಗೆ 8.15-9.15
ಕಾಲಾವಧಿ : 50 ದಿನಗಳು. 25.03.2022 ರಿಂದ
ಫ್ರೀ Class Notes + Practice Session
ಹೆಚ್ಚಿನ ವಿವರಗಳಿಗೆ ಖುದ್ದಾಗಿ ಸಂದರ್ಶಿಸಿರಿ
855/37, ಆಶೀರ್ವಾದ, II ಮೇನ್, VI A ಕ್ರಾಸ್, ಶ್ರೀ ಶಿವಕುಮಾರ ನಗರ, 1ನೇ ಹಂತ, ದಾವಣಗೆರೆ.
ಮೊ : 94498 55575, 87319 60339

**ಮಾಂತ್ರಿಕ ಮೋಡಿ ಬೆಟ್ಟಪ್ಪ**
ನಂ.1 ವಶೀಕರಣ ಸ್ಪೆಷಲಿಸ್ಟ್
ಸ್ತ್ರೀ-ಪುರುಷ ವಶೀಕರಣ, ಗುಪ್ತ ಲೈಂಗಿಕ ದಾಂಪತ್ಯ ಸಮಸ್ಯೆ, ಇಷ್ಟಪಟ್ಟವರು ನಿಮ್ಮಂತಾಗಲು 100% ಶೀಘ್ರದಲ್ಲೇ ಪರಿಹಾರ ಮಾಡುತ್ತಾರೆ. ಫೋನ್ ಮೂಲಕ ಸಂಪರ್ಕಿಸಿ: ಗಾಂಧಿ ಸರ್ಕಲ್, ದಾವಣಗೆರೆ.
89716 99826


## ಗೋವಿನಹಾಳ್ ಗ್ರಾಮದ ಕಣ್ಣಾಳ್ ರಾಜಮ್ಮ ನಿಧನ



ಹರಿಹರ ತಾಲ್ಲೂಕು ಗೋವಿನಹಾಳ್ ಗ್ರಾಮದ ವಾಸಿ ದಿ. ಕಣ್ಣಾಳ್ ಬಸಪ್ಪನವರ ಮಗ ಹಾಗೂ ಜಿ.ಪಂ. ಮಾಜಿ ಸದಸ್ಯರಾದ ಜಿ.ಬಿ.ಬಸವರಾಜಪ್ಪ ಅವರ ಹಿರಿಯ ಸಹೋದರರೂ, ನಿಟ್ಟೂರು ಪಿಎಸಿಎಸ್ ಸಿಇಓ ಜಿ.ಬಿ. ಹನುಮಂತಪ್ಪ ಅವರ ಧರ್ಮಪತ್ನಿ

**ಶ್ರೀಮತಿ ರಾಜಮ್ಮ** (55 ವರ್ಷ)

ಇವರು ದಿನಾಂಕ 24.03.2022ರ ಗುರುವಾರ ಸಂಜೆ 7 ಗಂಟೆಗೆ ನಿಧನರಾದರು. ಪತಿ, ಇಬ್ಬರು ಪುತ್ರಿಯರು, ಓರ್ವ ಪುತ್ರ ಸೇರಿದಂತೆ ಅಪಾರ ಬಂಧು-ಬಳಗವನ್ನು ಅಗಲಿರುವ ಮೃತರ ಅಂತ್ಯಕ್ರಿಯೆಯು ದಿನಾಂಕ 25.03.2022ರ ಶುಕ್ರವಾರ ಮಧ್ಯಾಹ್ನ 3 ಗಂಟೆಗೆ ಗೋವಿನಹಾಳ್ ಗ್ರಾಮದಲ್ಲಿ ನೆರವೇರಲಿದೆ.

**ದುಃಖತಪ್ತರು:**
**ಕಣ್ಣಾಳ್ ವಂಶಸ್ಥರು ಹಾಗೂ ಬಂಧು-ಮಿತ್ರರು, ಗೋವಿನಹಾಳ್**

## ಶ್ರೀಮತಿ ಸುನಂದಮ್ಮ ಎಲ್. ಅಚಲಕರ್ ನಿಧನ



ದಾವಣಗೆರೆ ದೇವರಾಜ ಅರಸ್ ಬಡಾವಣೆ ಅರಣ್ಯ ಇಲಾಖೆ ರಸ್ತೆ ವಾಸಿ ಲಕ್ಷ್ಮಣ್ ರಾವ್ ಅಚಲಕರ್ ಇವರ ಧರ್ಮಪತ್ನಿ ಶ್ರೀಮತಿ ಸುನಂದಮ್ಮ ಎಲ್ . ಅಚಲಕರ್ (65) ಅವರು ದಿನಾಂಕ 24.03.2022ರ ಗುರುವಾರ ರಾತ್ರಿ 8 ಗಂಟೆಗೆ ನಿಧನರಾದರು. ಪತಿ, ನಾಲ್ವರು ಪುತ್ರರು ಹಾಗು ಅಪಾರ ಬಂಧುಗಳನ್ನು ಅಗಲಿರುವ ಮೃತರ ಅಂತ್ಯಕ್ರಿಯೆಯು ದಿನಾಂಕ : 25.3.2022ರ ಶುಕ್ರವಾರ ಮಧ್ಯಾಹ್ನ 12.30ಕ್ಕೆ ನಗರದ ಪಿ.ಬಿ.ರಸ್ತೆಯ ವೈಕುಂಠಧಾಮದಲ್ಲಿ ನೆರವೇರಲಿದೆ.

# ಮಲೇಬೆನ್ನೂರಿನ ಉರುಸ್‌ಗೆ ಜನಸಾಗರ




ಮಲೇಬೆನ್ನೂರು, ಮಾ.24- ಇಲ್ಲಿನ ಪ್ರಸಿದ್ಧ ಹಜರತ್ ಸೈಯದ್ ಹಬೀಬುಲ್ಲಾ ಷಾ ಖಾದ್ರಿ ಅವರ ಉರುಸು ಗುರುವಾರ ಸಂಭ್ರಮದಿಂದ ಅಪಾರ ಭಕ್ತರ ಸಮ್ಮುಖದಲ್ಲಿ ಜರುಗಿತು. ಬೆಳಿಗ್ಗೆಯಿಂದಲೇ ಭಕ್ತರು ದರ್ಗಾಕ್ಕೆ ಆಗಮಿಸಿ, ಓದಿಕೆ ಮಾಡಿಸಿ ಭಕ್ತಿ ಸಮರ್ಪಿಸಿದರು.

ರಾತ್ರಿ ದರ್ಗಾ ಆವರಣದಲ್ಲಿ ನಡೆದ ಖವ್ವಾಲಿ ಗಾಯನ ಕೇಳಲು ಜನರು ಸಾಗರದಂತೆ ಹರಿದು ಬಂದಿದ್ದರು. ಸುಪ್ರಸಿದ್ಧ ಖವ್ವಾಲರಾದ ದೆಹಲಿಯ ರಯೀಸ್ ಮಿಯಾ ಮತ್ತು ಬೆಂಗಳೂರಿನ ಮೊಹಮ್ಮದ್ ಅಲಿ ತಬ್ರೇಜ್ ಹಾಗೂ ಸಂಗಡಿಗರು ಶುಕ್ರವಾರ ಬೆಳಗಿನ ಜಾವದವರೆಗೂ ನಡೆಸಿಕೊಟ್ಟ ಖವ್ವಾಲಿ ಗಾಯನ ಸೇರಿದ್ದವರ ಮನಸೂರೆಗೊಂಡಿತು.

ಶಾಸಕ ಎಸ್.ರಾಮಪ್ಪ, ಮಾಜಿ ಶಾಸಕ ಹೆಚ್. ಎಸ್.ಶಿವಶಂಕರ್, ಜಿಲ್ಲಾ ಜೆಡಿಎಸ್ ಅಧ್ಯಕ್ಷ ಬಿ.ಚಿದಾನಂದಪ್ಪ, ಬೆಳಗಾವಿ ವಿಟಿಯು ವಿಶ್ರಾಂತ ಕುಲಪತಿ ಡಾ. ಹೆಚ್.ಮಹೇಶಪ್ಪ, ಜಿ.ಪಂ. ಮಾಜಿ ಸದಸ್ಯ ಬೆಣ್ಣೆಹಳ್ಳಿ ಹಾಲೇಶಪ್ಪ, ಎಪಿಎಂಸಿ ಮಾಜಿ ಅಧ್ಯಕ್ಷ ಜಿ.ಮಂಜುನಾಥ್ ಪಟೇಲ್, ಡಿಸಿಸಿ ಬ್ಯಾಂಕಿನ ಮಾಜಿ ಉಪಾಧ್ಯಕ್ಷ ಜಿಗಳಿ ಆನಂದಪ್ಪ, ತಾ.ಪಂ. ಮಾಜಿ ಅಧ್ಯಕ್ಷ ಬಿ. ಹೆಚ್.ತಿಪ್ಪಾರುದ್ರ ರೆಡ್ಡಿ, ಉರುಸು ಕಮಿಟಿ ಅಧ್ಯಕ್ಷ ಎಂ.ಬಿ.ಖುರಾಬ್‌ನ ಅಲಿ, ಬ್ಲಾಕ್ ಕಾಂಗ್ರೆಸ್ ಅಧ್ಯಕ್ಷ ಎಂ.ಬಿ.ಅಬೀದ್ ಅಲಿ, ಪುರಸಭೆ ಸದಸ್ಯ ರಾದ ಸಿ.ಅಬ್ದುಲ್ ಮಾಜೀದ್, ಮಾಜಿ ಸದಸ್ಯ ರಾದ ದಾದಾವಲಿ, ಯೂಸೂಫ್, ಎಂ.ಬಿ.ಪೈಜು, ಮುನೀರ್ ಸಾಬ್, ಡಾ.ಖಾದರ್, ಬಾಂಬೆ ಮುಸ್ತಾಫ್, ಬಿ.ರಫೀವುಲ್ಲಾ, ಹರಿಹರ ತಾ. ಗ್ರಾ.ಜೆಡಿಎಸ್ ಅಧ್ಯಕ್ಷ ಹಳ್ಳಿಹಾಳ್ ಪರಮೇಶ್ವರಪ್ಪ, ಸಿ.ಅಬ್ದುಲ್ ಹಾದಿ, ಕೊಕ್ಕನೂರು ಸೋಮಶೇಖರ್, ಸಮಾಜ ಸೇವಕ ನಂದಿಗಾವಿ ಶ್ರೀನಿವಾಸ್, ಕೆ.ಪಿ.ಗಂಗಾಧರ್, ಶಕ್ತಿ ಸಾಮಿಲ್ ಮುನ್ನಾ, ಕೆ.ಇ.ಬಿ ಗುತ್ತಿಗೆದಾರ ಖುದ್ದೂಸ್ ಸೇರಿದಂತೆ ಇನ್ನೂ ನೂರಾರು ಮುಖಂಡರು ಭಾಗವಹಿಸಿದ್ದರು.

ನಾಡಿನ ವಿವಿಧ ನಗರ - ಪಟ್ಟಣಗಳಿಂದ ಸಾವಿರಾರು ಜನ ಉರುಸ್‌ನಲ್ಲಿ ಪಾಲ್ಗೊಂಡಿದ್ದರು. ಸಿಪಿಐ ಸತೀಶ್ ಕುಮಾರ್, ಪಿಎಸ್ಐ ರವಿಕುಮಾರ್ ನೇತೃತ್ವದಲ್ಲಿ ಸೂಕ್ತ ಬಂದೋಬಸ್ತ್ ಕೈಗೊಳ್ಳಲಾಗಿತ್ತು.

## ಪರೀಕ್ಷೆಗೂ, ಹಿಜಾಬ್‌ಗೂ ಸಂಬಂಧ ಇಲ್ಲ

**(1ನೇ ಪುಟದಿಂದ)** ಕೋರಿದ್ದರು. ಆದರೆ, ಪರೀಕ್ಷೆಗೂ ಈ ವಿಷಯಕ್ಕೂ ಯಾವುದೇ ಸಂಬಂಧ ಇಲ್ಲ ಎಂದು ಪೀಠ ಹೇಳಿದೆ. ಈ ವಿಚಾರವನ್ನು ಸಂಚಲನಾತ್ಮಕಗೊಳಿ ಸಬಾರದು ಎಂದೂ ನ್ಯಾಯಾಲಯ ವಕೀಲರಿಗೆ ಹೇಳಿದೆ.

ಬರುವ 28ರಿಂದ ಪರೀಕ್ಷೆಗಳು ನಡೆಯಲಿವೆ. ವಿದ್ಯಾರ್ಥಿನಿಯರು ಶಾಲೆಗಳಿಗೆ ಬರದಂತೆ ತಡೆಯಲಾಗುತ್ತಿದೆ. ಇದರಿಂದ ಒಂದು ವರ್ಷ ಹಾಳಾಗಲಿದೆ ಎಂದು ಕಾಮತ್ ಹೇಳಿದರು. ಆದರೆ, ಮನವಿ ಅಂಗೀಕರಿಸಲು ಸುಪ್ರೀಂ ಕೋರ್ಟ್ ನಿರಾಕರಿಸಿದೆ.

ಹೋಳಿ ನಂತರ ಅರ್ಜಿಯ ವಿಚಾರಣೆ ನಡೆಸಲಾಗುವುದು ಎಂದು ಕಳೆದ ಮಾರ್ಚ್ 16ರಂದು ಸುಪ್ರೀಂ ಕೋರ್ಟ್ ಹೇಳಿತ್ತು.

ಹಿಜಾಬ್ ಇಸ್ಲಾಂ ಧರ್ಮದ ಅತ್ಯಗತ್ಯ ಅಂಶವಲ್ಲ ಎಂದು ಹೇಳಿದ್ದ ಕರ್ನಾಟಕ ಹೈಕೋರ್ಟ್, ವಿದ್ಯಾರ್ಥಿನಿಯರು ಶಾಲಾ ಕೋಣೆಯೊಳಗೆ ಹಿಜಾಬ್ ಧರಿಸಲು ಅವಕಾಶ ನೀಡಲಾಗದು ಎಂದು ತಿಳಿಸಿತ್ತು. ನಂತರ ಈ ವಿಷಯಕ್ಕೆ ಸಂಬಂಧಿಸಿದಂತೆ ಕೆಲ ಅರ್ಜಿದಾರರು ಸುಪ್ರೀಂ ಕೋರ್ಟ್ ಮೊರೆ ಹೋಗಿದ್ದರು.

## ವಿಶ್ವಗುರುವಾಗಲು ಕರ್ತವ್ಯ ಪಾಲಿಸಿ

**(1ನೇ ಪುಟದಿಂದ)** ವ್ಯಕ್ತಿಗಳ ಕೈಗೆ ಸಿಲುಕಿದಾಗ ಮಾರಕವಾಗುತ್ತವೆ. ವಿಜ್ಞಾನ - ತಂತ್ರಜ್ಞಾನಗಳು ಕಲ್ಯಾಣಕಾರಿ ಆಗಲು ಜೀವನಮೌಲ್ಯಗಳನ್ನು ಅರಳಿಸಬೇಕು ಎಂದರು.

ವಿಜ್ಞಾನ, ತಂತ್ರಜ್ಞಾನಗಳೇ ಜೀವನದ ಸರ್ವಸ್ವವಲ್ಲ. ವಿಜ್ಞಾನದೊಡನೆ ಸಮಗ್ರ ಜೀವನ ದೃಷ್ಟಿ, ಮಾನವ ಕಲ್ಯಾಣದ ಮೌಲ್ಯ ಗಳು ಮೇಳವಿಸದಿದ್ದಾಗ ವಿನಾಶಕ್ಕೂ ದಾರಿ ಯಾಗಬಲ್ಲದು ಎಂದವರು ಎಚ್ಚರಿಸಿದರು.

ಸ್ವಾಗತ ಭಾಷಣ ಮಾಡಿದ ದಾವಣಗೆರೆ ವಿ.ವಿ. ಕುಲಪತಿ ಪ್ರೊ. ಎಸ್.ವಿ. ಹಲಸೆ, ವಿಶ್ವವಿದ್ಯಾನಿಲಯಕ್ಕೆ 5 ಕೋಟಿ ರೂ.ಗಳಿಗೂ ಹೆಚ್ಚು ಸಂಶೋಧನಾ ಅನುದಾನ ದೊರೆತಿದೆ. 500ಕ್ಕೂ ಹೆಚ್ಚು ಸಂಶೋಧನಾ ಪತ್ರಿಕೆಗಳು ಪ್ರಕಟವಾಗಿವೆ. ಹೆಚ್- ಇಂಡೆಕ್ಸ್ 63 ಮತ್ತು 25,600 ಸೈಟೇಷನ್ಸ್ ಆಗಿವೆ ಎಂದು ಹೇಳಿದರು.

ಈ ವರ್ಷ 32 ಪೇಟೆಂಟ್‌ಗಳಿಗೆ ಅರ್ಜಿ ಸಲ್ಲಿಸಲಾಗಿದೆ ಮತ್ತು 8 ಅಂತರರಾಷ್ಟ್ರೀಯ ಪೇಟೆಂಟ್‌ಗಳನ್ನು ಪಡೆದುಕೊಳ್ಳಲಾಗಿದೆ. ಸುಸಜ್ಜಿತ ಕೇಂದ್ರೀಯ ಸಭಾಂಗಣ ಹಾಗೂ ಯೋಗ ಧ್ಯಾನ ಕೇಂದ್ರಕ್ಕೆ 12 ಕೋಟಿ ರೂ.ಗಳ ಅನುದಾನ ಮಂಜೂರಾಗಿದೆ ಎಂದು ತಿಳಿಸಿದರು.

ಸಮಾರಂಭದಲ್ಲಿ ವಿದ್ಯಾರ್ಥಿಗಳಿಗೆ ಚಿನ್ನದ ಪದಕ ಪ್ರದಾನ ಮಾಡಲಾಯಿತು. ಇತಿಹಾಸ ತಜ್ಞ ಚಿತ್ರದುರ್ಗದ ಪ್ರೊ. ಲಕ್ಷ್ಮಣ ತೆಲಗಾವಿ, ಜಾನಪದ ವಿದ್ವಾಂಸ ಚಿತ್ರದುರ್ಗ ಜಿಲ್ಲೆ ಚಳ್ಳಕೆರೆಯ ಡಾ. ಮೀರಾ ಸಾಬಿಹಳ್ಳಿ ಶಿವಣ್ಣ ಮತ್ತು ಯೋಗ, ನಿಸರ್ಗ ಚಿಕಿತ್ಸಾ ತಜ್ಞ ಮತ್ತು ಆಯುರ್ವೇದ ವಿಜ್ಞಾನ ಸಂಸ್ಥೆಯ ವಿ.ಎಂ. ಶಶಿಕುಮಾರ್ ಅವರಿಗೆ ಗೌರವ ಡಾಕ್ಟರೇಟ್ ಪದವಿ ಪ್ರದಾನ ಮಾಡಲಾಯಿತು.

ಘಟಿಕೋತ್ಸವ ಸಮಾರಂಭದಲ್ಲಿ ಪರೀಕ್ಷಾಂಗ ಕುಲಸಚಿವೆ ಪ್ರೊ. ಹೆಚ್.ಎಸ್. ಅನಿತಾ, ಆಡಳಿತ ಕುಲಸಚಿವೆ ಪ್ರೊ. ಗಾಯತ್ರಿ ದೇವರಾಜ್, ವಿವಿಧ ನಿಕಾಯಗಳ ಮುಖ್ಯಸ್ಥರು, ವಿದ್ಯಾ ವಿಷಯಕ್ ಪರಿಷತ್ ಸದಸ್ಯರು ಮತ್ತಿತರರು ಉಪಸ್ಥಿತರಿದ್ದರು.

### ಘಟಿಕೋತ್ಸವ ಭಾಷಣದಲ್ಲಿ ಧರ್ಮ, 'ತುಕಡೇ' ಅಂಶಗಳ ಕಡಿತ

ಒಡಿಶಾ ಕೇಂದ್ರೀಯ ವಿಶ್ವವಿದ್ಯಾನಿಲಯದ ಮಾಜಿ ಕುಲಪತಿ ಡಾ. ಪಿ.ವಿ. ಕೃಷ್ಣಭಟ್ ಅವರ ಘಟಿಕೋತ್ಸವ ಭಾಷಣದ ಲಿಖಿತ ಪ್ರತಿಯಲ್ಲಿ ದೆಹಲಿ ವಿ.ವಿ.ಯ ತುಕಡೇ ತುಕಡೇ ಘೋಷಣೆ ಹಾಗೂ ಧರ್ಮಕ್ಕೆ ಸಂಬಂಧಿಸಿದ ಅಂಶಗಳಿದ್ದವು. ಆದರೆ, ಕೃಷ್ಣ ಭಟ್ ಮಾತನಾಡುವಾಗ ಆ ಅಂಶಗಳನ್ನೆಲ್ಲ ಕೈ ಬಿಟ್ಟರು.

ನಳಂದ, ತಕ್ಷಶಿಲಾ, ವಿಕ್ರಮಶಿಲಾ ವಿಶ್ವವಿದ್ಯಾನಿಲಯ ಗಳ ಮೇಲೆ ಬಖ್ತಿಯಾರ್ ಖಿಲ್ಜಿ ನಡೆಸಿದ ದಾಳಿ, ದೆಹಲಿಯ ಜೆ.ಎನ್.ಯು. ವಿಶ್ವವಿದ್ಯಾನಿಲಯದಲ್ಲಿ ಕೇಳಿ ಬಂದ 'ಭಾರತ್ ತೇರೆ ತುಕಡೇ ಹೋಂಗೆ' ಘೋಷಣೆ, ಧರ್ಮದ ವ್ಯಾಖ್ಯಾನ, ಭಗವದ್ ಗೀತೆಯಲ್ಲಿ ಅರ್ಥ ಹಾಗೂ ಕಾಮದ ಬಗ್ಗೆ ಇರುವ ವ್ಯಾಖ್ಯಾನದಂತಹ ವಿಷಯಗಳು ಲಿಖಿತ ಭಾಷಣದಲ್ಲಿದ್ದವು. ದೆಹಲಿಯ ಜೆ.ಎನ್.ಯು. ವಿ.ವಿ. ಯಂತಹ ಪ್ರತಿಷ್ಠಿತ ವಿಶ್ವವಿದ್ಯಾನಿಲಯಗಳ ವಿದ್ಯಾರ್ಥಿಗಳು ಭಾರತ್ ತೇರೆ ತುಕಡೇ ಹೋಂಗೆ ಎಂಬ ಘೋಷಣೆ ಹಾಕುವ ಮಟ್ಟಕ್ಕೆ ತಲುಪಿರುವುದು ನಿಮ್ಮ ಶಿಕ್ಷಣ ವ್ಯವಸ್ಥೆಯ ಘೋರ ದುರಂತವೆನ್ನದೇ ಬೇರೇನು ಹೇಳಲಾದೀತು ಎಂಬ ಮಾತು ಲಿಖಿತ ಭಾಷಣದಲ್ಲಿತ್ತು.

ಭಾರತೀಯ ಪರಂಪರೆಯಲ್ಲಿ ಎಲ್ಲಾ ಜೀವನ ಮೌಲ್ಯಗಳ ಸಮುಚ್ಚಯವನ್ನೇ ಧರ್ಮ ಎಂದು ಕರೆಯಲಾಗಿದೆ. ಧರ್ಮ ಶಬ್ದದ ಅರ್ಥವ್ಯಾಪ್ತಿಯನ್ನು ಸರಿಯಾಗಿ ತಿಳಿಯದೇ ಅದನ್ನು 'ರಿಲಿಜಿಯನ್' ಶಬ್ದಕ್ಕೆ ಪರ್ಯಾಯವಾಗಿ ಪರಿಗಣಿಸಿರುವುದು ಬಹಳಷ್ಟು ಅನರ್ಥಗಳಿಗೆ ಕಾರಣವಾಗಿದೆ ಎಂಬ ಹೇಳಿಕೆಯೂ ಲಿಖಿತ ಭಾಷಣದಲ್ಲಿತ್ತು.

## ರಾಷ್ಟ್ರ ಸೇಪಕ್‌ಟಕ್ರಾ ಕ್ರೀಡಾಕೂಟಕ್ಕೆ ಆಯ್ಕೆ

ದಾವಣಗೆರೆ, ಮಾ. 24- ರಾಜಸ್ಥಾನದ ಜೈಪುರದಲ್ಲಿ ಇದೇ ದಿನಾಂಕ 27 ರಿಂದ 31 ರವರೆಗೆ ನಡೆಯುವ ರಾಷ್ಟ್ರಮಟ್ಟದ ಸೇಪಕ್‌ಟಕ್ರಾ ಕ್ರೀಡಾಕೂಟಕ್ಕೆ ಅನ್‌ಮೋಲ್ ಪಬ್ಲಿಕ್ ಶಾಲೆಯ ವಿದ್ಯಾರ್ಥಿಗಳು ಆಯ್ಕೆಗೊಂಡಿದ್ದಾರೆ.

ಜ್ಯೂನಿಯರ್ ವಿಭಾಗದಲ್ಲಿ ಡಿ.ಎನ್. ಚೇತನ್‌ಕುಮಾರ್, ಯಶ್‌ವೀರ್ ಎಸ್. ಹಾವೇರಿ, ಚರಣ್‌ಸಾಗರ್, ಪ್ರಿಯಾಂಕ ಪೂಜಾರ್, ಎಂ. ನಿತ್ಯ, ಸಬ್ ಜ್ಯೂನಿಯರ್ ವಿಭಾಗದಲ್ಲಿ ವಿಂಧ್ಯಾ ಹೆಚ್. ಪಾಟೀಲ್ ಮತ್ತು ತರಬೇತುದಾರ ನಾಗೇಶ್ ಆಯ್ಕೆಯಾಗಿದ್ದಾರೆ.

## ಪಿಂಚಣಿ ಹೆಚ್ಚಳಕ್ಕೆ ಪರಿಶೀಲನೆ

**(1ನೇ ಪುಟದಿಂದ)** ಪ್ರಶ್ನೆಗೆ ಉತ್ತರಿಸಿದ ಮುಖ್ಯಮಂತ್ರಿ, ರಾಷ್ಟ್ರೀಯ ಮತ್ತು ರಾಜ್ಯ ವೇತನ ಆಯೋಗಗಳ ಶಿಫಾರಸ್ಸಿನ ಮೇಲೆ 80 ವರ್ಷ ಮೇಲ್ಪಟ್ಟ ನಿವೃತ್ತ ಸರ್ಕಾರಿ ನೌಕರರಿಗೆ ಪಿಂಚಣಿಯಲ್ಲಿ ಶೇಕಡ 20, ಶೇಕಡ 30, ಶೇಕಡ 40, ಶೇಕಡ 50ರಷ್ಟು ಮೂಲ ಪಿಂಚಣಿ ಹೆಚ್ಚಳಕ್ಕೆ ನಿರ್ಧರಿಸಲಾಗಿದೆ. 70 ವರ್ಷ ಮೇಲ್ಪಟ್ಟವರಿಗೂ ಈ ಸೌಲಭ್ಯ ವಿಸ್ತರಿಸಲು ಏಳನೇ ವೇತನ ಆಯೋಗದ ವರದಿ ಬಳಿಕ ಪರಿಶೀಲಿಸುವುದಾಗಿ ಭರವಸೆ ನೀಡಿದರು.


**ಬೇಕಾಗಿದ್ದಾರೆ**
ಕನ್ನಡ - 2, ಇಂಗ್ಲಿಷ್ -1
ಸಮಾಜ ವಿಜ್ಞಾನ -2
ಬಿ.ಎ., ಬಿ.ಇಡಿ ಆದ ಶಿಕ್ಷಕರು ಸಂಪರ್ಕಿಸಿ :
80958 69654

**ಬೇಕಾಗಿದ್ದಾರೆ**
ಹರಿಹರದ ವೈನ್ ಶಾಪ್‌ಗಳಲ್ಲಿ ಕೆಲಸ ಮಾಡಲು ಬಿಲ್ಲಿಂಗ್ ಆಪರೇಟರ್ಸ್, ಹೆಲ್ಪರ್ಸ್, ಸಪ್ಲೈಯರ್ಸ್ ಬೇಕಾಗಿದ್ದಾರೆ. ಹರಿಹರದವರಿಗೆ ಆದ್ಯತೆ. ಸಂಪರ್ಕಿಸಿ :
99726 98591
81055 47878

**ಮಿಯಾಖಾನ್**
ಎಲ್ಲ ಸಮಸ್ಯೆಗಳಿಗೆ 101% ಗ್ಯಾರಂಟಿ ಪರಿಹಾರ.
ವಶೀಕರಣ ಸ್ಪೆಷಲಿಸ್ಟ್ , ನಿಮ್ಮ ಸಮಸ್ಯೆಗಳಾದ ಆಸ್ತಿ-ಪಾಸ್ತಿ, ಕೋರ್ಟ್ - ಕಛೇರಿ, ಗರ್ಭಿಣಿ ತೊಂದರೆ, ವಿದೇಶ ಪ್ರವಾಸ, ಹಣಕಾಸಿನ ತೊಂದರೆ, ಮಾಟ-ಮಂತ್ರ, ಸತಿ-ಪತಿ ಕಲಹ, ಮನೆಯಲ್ಲಿ ಅಶಾಂತಿ, ಕೆಲಸ ಮತ್ತು ವ್ಯವಹಾರದಲ್ಲಿ ತೊಂದರೆ, ಪ್ರೇಮವಿಚಾರ ಇನ್ನೂ ಮುಂತಾದ ನಿಮ್ಮ ಎಲ್ಲಾ ಸಮಸ್ಯೆಗಳಿಗೆ ಒಮ್ಮೆ ಭೇಟಿ ನೀಡಿ ತಕ್ಷಣ ಪರಿಹರಿಸಿಕೊಳ್ಳಿ. ದಾವಣಗೆರೆ
ಮೊ : 84769 49581

**ಶಿಕ್ಷಕರು ಬೇಕಾಗಿದ್ದಾರೆ**
ಶ್ರೀ ಗುರುಕುಲ ವಿದ್ಯಾಸಂಸ್ಥೆ, ಸಿ.ಬಿ.ಎಸ್.ಇ ಶಾಲೆ, ತುರ್ಚಘಟ್ಟ. ಗಣಿತ, ವಿಜ್ಞಾನ, ಇಂಗ್ಲಿಷ್, ಗಣಕಯಂತ್ರ ವಿಷಯದಲ್ಲಿ ಪರಿಣತಿ ಹೊಂದಿರುವ ಶಿಕ್ಷಕರು ಬೇಕಾಗಿದ್ದಾರೆ. ಆಸಕ್ತಿ ಇರುವವರು, ಈ ನಂಬರ್‌ಗೆ ಸಂಪರ್ಕಿಸಿ.
73386 04513, 73386 04512

**ಬೇಕಾಗಿದ್ದಾರೆ**
ಬಟ್ಟೆ ಅಂಗಡಿಗೆ ಕೆಲಸಕ್ಕೆ Sales Boys ಬೇಕಾಗಿದ್ದಾರೆ. (ಅನುಭವವುಳ್ಳವರಿಗೆ ಆದ್ಯತೆ)
77602 68105

ಶ್ರೀ ಗುರು ಮರುಳಸಿದ್ದೇಶ್ವರ ಸ್ವಾಮಿ ಸೇವಾ ಸಂಸ್ಥೆ (ರಿ.)
**ಹಿಂದೂ ವಧು-ವರರ ಮಾಹಿತಿ ಕೇಂದ್ರ,**
www.hindusmatrimony.com
ನಮ್ಮಲ್ಲಿ ಎಲ್ಲಾ ತರಹದ ಹಿಂದೂ ವಧು-ವರರಿಗಾಗಿ ಸಂಪರ್ಕಿಸಿ.
ವಿಳಾಸ : ಬಾಣಾಪುರಮಠ ಹಾಸ್ಪಿಟಲ್ ಎದುರು, 8ನೇ ಮೇನ್, ಪಿ.ಜೆ. ಬಡಾವಣೆ, ದಾವಣಗೆರೆ-2.
94481-59303, 94834 63783

**ಶ್ರೀ ಘುತ್ತರಕಿ ಭಾಗ್ಯಮ್ಮದೇವಿ ಜ್ಯೋತಿಷ್ಯಾಲಯ**
ಶ್ರೀ ದತ್ತಾತ್ರೇಯ ಉಪಾಸಕರು ಪಂಡಿತ್ ಶ್ರೀ ಭರತ್ ಗುರೂಜಿ
ಮನೆಯಲ್ಲಿ ಅಶಾಂತಿ, ಅನಾರೋಗ್ಯ, ವಿದ್ಯೆ, ಉದ್ಯೋಗ, ವ್ಯಾಪಾರ, ಶತ್ರು ಕಾಟ, ಮಾಟ-ಮಂತ್ರ, ಸ್ತ್ರೀ-ಪುರುಷ ವಶೀಕರಣ, ಲಕ್ಷ್ಮೀ ವಶ, ಭೂಮಿ ವಶ, ವಿದೇಶ ಪ್ರಯಾಣ, ಸಾಲದ ಬಾಧೆ ಇನ್ನೂ ನಿಮ್ಮ ಹಲವು ಸಮಸ್ಯೆಗಳಿಗೆ ಶೀಘ್ರ ಪರಿಹಾರ. ಫೋನಿನ ಮೂಲಕ ಸ್ವರ ಭವಿಷ್ಯದ ನಿಮ್ಮ ಸಮಸ್ಯೆಗಳಿಗೆ ಪರಿಹಾರ ತಿಳಿಸುತ್ತಾರೆ. ಇಂದೇ ಕರೆ ಮಾಡಿ
9980770791

**ಪಿತ್ರಾರ್ಜಿತ / ಕುಟುಂಬದ ಆಸ್ತಿ**
ನಿಮ್ಮ ಕುಟುಂಬದ ಪೂರ್ವಜರ ಮತ್ತು ಒಟ್ಟು ಕುಟುಂಬದ ಆಸ್ತಿಗಳಿಂದ ನಿಮಗೆ ಬರಬೇಕಾಗಿರತಕ್ಕ ಪಾಲಿನ ಭಾಗ ಪಡೆಯಲು ಸಂಪರ್ಕಿಸಿರಿ :
ಹೊನ್ನೂರಸ್ವಾಮಿ ವಾಂಜ್ರೆ
87926 04196

**SUMMER TUITIONS**
FOR SSLC/ PCMB / COMM /ARTS/
100 % Results With solved notes.
SINCHANA ACADEMY
Near RAM & Co Circle, Davangere
90195 80600
85532 78258

**ಆಸ್ತಿ ಖರೀದಿಸಿರುವ ಬಗ್ಗೆ**
ನೀವು ಕ್ರಯಕ್ಕೆ ಖರೀದಿಸಿ ಮುಂಗಡ ಹಣ ನೀಡಿದ್ದರೂ ನಿಮ್ಮ ಹೆಸರಿಗೆ ಕ್ರಯಪತ್ರ ರಿಜಿಸ್ಟರ್ ಆಗಿರದ ಮನೆ, ಸೈಟು, ಜಮೀನುಗಳ ಬಗ್ಗೆ ಇರತಕ್ಕ ತಕರಾರನ್ನು ಪರಿಹರಿಸಿಕೊಳ್ಳಲು ಸಂಪರ್ಕಿಸಿರಿ
ಹೊನ್ನೂರಸ್ವಾಮಿ ವಾಂಜ್ರೆ
87926 04196


## ಅರಕೆರೆ ಗ್ರಾಪಂಗೆ ಮಂಜಣ್ಣ ಅಧ್ಯಕ್ಷ



ಹೊನ್ನಾಳಿ, ಮಾ.24- ತಾಲ್ಲೂಕಿನ ಅರಕೆರೆ ಗ್ರಾಮ ಪಂಚಾಯಿತಿ ಅಧ್ಯಕ್ಷರಾಗಿ ನರಸಗೊಂಡನಹಳ್ಳಿ ಎನ್.ಆರ್. ಮಂಜುನಾಥ್ ಸೋಮವಾರ ಅವಿರೋಧವಾಗಿ ಆಯ್ಕೆಯಾಗಿದ್ದಾರೆ.

ಎ.ಬಿ. ರಂಗಪ್ಪ ರಾಜೀನಾಮೆಯಿಂದ ತೆರವಾಗಿದ್ದ ಅಧ್ಯಕ್ಷ ಸ್ಥಾನಕ್ಕೆ ಸೋಮವಾರ ಚುನಾವಣೆ ನಿಗದಿಯಾಗಿತ್ತು. ಚುನಾವಣಾಧಿಕಾರಿಯಾಗಿದ್ದ ತಾಲ್ಲೂಕು ಸಮಾಜ ಕಲ್ಯಾಣ ಇಲಾಖೆಯ ಅಧಿಕಾರಿ ಹೆಚ್.ಎಲ್. ಉಮಾ ಅವರು ಆಯ್ಕೆಯನ್ನು ಘೋಷಿಸಿದರು. ಅರಕೆರೆ ಗ್ರಾಪಂ ಉಪಾಧ್ಯಕ್ಷೆ ಪ್ರಮೀಳಾ ಶಂಕರಾಚಾರಿ, ಸದಸ್ಯರಾದ ಎ.ಬಿ. ರಂಗಪ್ಪ, ಸವಿತಾ ನಾಗರಾಜ್, ಆಶಾ ರಮೇಶ್, ಎಚ್. ವೆಂಕಟೇಶ್, ಎಸ್.ಎಸ್. ಮಹೇಂದ್ರಪ್ಪ, ಉಮಾದೇವಿ ತಿಮ್ಮೇಶ್, ಪಿಡಿಓ ಆರ್. ಹನುಮಂತಮ್ಮ, ಕಾರ್ಯದರ್ಶಿ ಜಿ.ಟಿ. ಚೌಡಪ್ಪ ಹಾಗೂ ಇತರರು ಉಪಸ್ಥಿತರಿದ್ದರು.

## ಗ್ರಾ.ಪಂ ಬಿಲ್ ಕಲೆಕ್ಟರ್ ಆತ್ಮಹತ್ಯೆ

ಜಗಳೂರು, ಮಾ. 24- ಗುರುಸಿದ್ಧಾಪುರ ಗ್ರಾಮ ಪಂಚಾಯತಿ ಬಿಲ್ ಕಲೆಕ್ಟರ್ ಬಸವರಾಜ್ ನೇಣು ಬಿಗಿದುಕೊಂಡು ಆತ್ಮಹತ್ಯೆ ಮಾಡಿಕೊಂಡಿರುವ ಘಟನೆ ತಾಲ್ಲೂಕಿನ ಮಲೆಮಾಚಿಕೆರೆ ಅರಣ್ಯ ಪ್ರದೇಶದಲ್ಲಿ ಗುರುವಾರ ಬೆಳಗ್ಗೆ ಸಂಭವಿಸಿದೆ. ಈ ಸಂಬಂಧ ಜಗಳೂರು ಪೊಲೀಸ್ ಠಾಣೆಯಲ್ಲಿ ಪ್ರಕರಣ ದಾಖಲಿಸಲಾಗಿದೆ.

## ವಿದ್ಯುತ್ ತಂತಿ ತಗುಲಿ ರೈತನ ಸಾವು



ಹರಪನಹಳ್ಳಿ, ಮಾ.24- ಜಮೀನಿಗೆ ನೀರು ಹಾಯಿಸಲು ಹೋಗಿದ್ದ ವೇಳೆ ವಿದ್ಯುತ್ ತಂತಿ ತಗುಲಿ ರೈತ ಸ್ಥಳದಲ್ಲೇ ಮೃತಪಟ್ಟಿರುವ ಘಟನೆ ತಾಲ್ಲೂಕಿನ ಯಡಿಹಳ್ಳಿ ಗ್ರಾಮದಲ್ಲಿ ಜರುಗಿದೆ. ಹೊಳಲು ಜಂಬಪ್ಪ (48) ಮೃತ ದುರ್ದೈವಿ. ಶಾಸಕ ಕರುಣಾಕರ ರೆಡ್ಡಿ, ಬಿಜೆಪಿ ತಾಲ್ಲೂಕು ಅಧ್ಯಕ್ಷ ಸತ್ತೂರು ಹಾಲೇಶ್, ಯಡಿಹಳ್ಳಿ ಶೇಖರಣ್ಣ, ಶಿರಗಾನಳ್ಳಿ ವಿಶ್ವನಾಥ್, ಚಿರಸ್ಥಹಳ್ಳಿ ಬಸವರಾಜಪ್ಪ, ರಾಮಪ್ಪ ಮೃತರಿಗೆ ಸಂತಾಪ ಸೂಚಿಸಿದ್ದಾರೆ.

## ಹೂವಿನಮಡುವಿನಲ್ಲಿಂದು ರಂಭಾಪುರಿ ಶ್ರೀಗಳ ಅಡ್ಡಪಲ್ಲಕ್ಕಿ ಉತ್ಸವ



ರಂಭಾಪುರಿ ಪೀಠದ ಜದಗ್ಗುರು ಡಾ. ವೀರಸೋಮೇಶ್ವರ ಶಿವಾಚಾರ್ಯ ಸ್ವಾಮೀಜಿಯವರ ಅಡ್ಡಪಲ್ಲಕ್ಕಿ ಮಹೋತ್ಸವ ಹಾಗೂ ಜನಜಾಗೃತಿ ಕಾರ್ಯಕ್ರಮವು ದಾವಣಗೆರೆ ತಾಲ್ಲೂಕಿನ ಹೂವಿನಮಡು ಗ್ರಾಮದಲ್ಲಿ ಇಂದು ನಡೆಯಲಿದೆ.

ಬೆಳಿಗ್ಗೆ 11.30ಕ್ಕೆ ರಂಭಾಪುರಿ ಜಗದ್ಗುರುಗಳ ಸಾನ್ನಿಧ್ಯ, ಆವರಗೊಳ್ಳದ ಶ್ರೀ ಓಂಕಾರ ಶಿವಾಚಾರ್ಯ ಸ್ವಾಮೀಜಿ ನೇತೃತ್ವ, ಬಸವಾಪಟ್ಟಣದ ಶ್ರೀ ಶಿವಕುಮಾರ ಹಾಲಸ್ವಾಮೀಜಿ ಸಮ್ಮುಖ, ಎಚ್. ಎಂ.ಹಾಲಸ್ವಾಮಿಗಳ ಉಪಸ್ಥಿತಿಯಲ್ಲಿ ಕಾರ್ಯಕ್ರಮ ನಡೆಯಲಿದೆ.

## ಗುಡಾಳು: 28 ಕ್ಕೆ ಶ್ರೀ ಆಂಜನೇಯ ತೇರು

ದಾವಣಗೆರೆ ತಾಲ್ಲೂಕಿನ ಗುಡಾಳು ಗ್ರಾಮದ ಶ್ರೀ ಆಂಜನೇಯ ಸ್ವಾಮಿ ರಥೋತ್ಸವವು ಇದೇ ದಿನಾಂಕ 28 ರ ಸೋಮವಾರ ಬೆಳಿಗ್ಗೆ 7.30 ಕ್ಕೆ ನಡೆಯಲಿದೆ. ಇಂದು ಬೆಳಿಗ್ಗೆ 6.30 ಕ್ಕೆ ಆಂಜನೇಯ ಸ್ವಾಮಿಗೆ ಅಭಿಷೇಕ, ನಾಳೆ ಶನಿವಾರ ಸಂಜೆ 6.30 ಕ್ಕೆ ಆನೆ ಉಚ್ಚಾಯ, ದಿನಾಂಕ 27 ರ ಭಾನುವಾರ ಸಂಜೆ 6.30 ಕ್ಕೆ ಬಸವನ ಉಚ್ಚಾಯ ಹಾಗೂ ರಾತ್ರಿ 10 ಗಂಟೆಗೆ ಶ್ರೀ ಸ್ವಾಮಿಗೆ ಎಣ್ಣೆ ಮಜ್ಜನ. ದಿನಾಂಕ 28 ರ ಸೋಮವಾರ ಬೆಳಿಗ್ಗೆ 7.30 ಕ್ಕೆ ಶ್ರೀ ಆಂಜನೇಯ ಸ್ವಾಮಿಯ ದೊಡ್ಡ ರಥೋತ್ಸವ ನಡೆಯುವುದು. ದಿನಾಂಕ 29 ರ ಮಂಗಳವಾರ ಬೆಳಿಗ್ಗೆ 8 ಗಂಟೆಗೆ ಓಕಳಿ ನಡೆಯುವುದು.

# ನವೀನ್ ಪೋಷಕರಿಗೆ ರಾಜ್ಯಪಾಲರಿಂದ ಸಾಂತ್ವನ



**ರಾಜ್ಯಪಾಲರು ತಮಗೆ ನೀಡಿದ ಶರಬತ್ ಕುಡಿದ ನಂತರ ಖಾಲಿ ಲೋಟವನ್ನು ನವೀನ್ ತಂದೆ ತೆಗೆದುಕೊಳ್ಳಲು ಕೈ ಚಾಚಿದರು. ಆದರೆ ರಾಜ್ಯಪಾಲರು ಅವರ ಕೈಯಲ್ಲಿ ಅದನ್ನು ನೀಡದೇ ತಮ್ಮ ಸಿಬ್ಬಂದಿಯನ್ನು ಕರೆದು ಕೊಟ್ಟು ಕಳುಹಿಸಿದರು.**
**ಸಾಂತ್ವನ ಹೇಳಿ ಅಲ್ಲಿಂದ ತೆರಳುವಾಗ ರಾಜ್ಯಪಾಲರು ನವೀನ್ ಪೋಷಕರಿಗೆ ತಲೆಬಾಗಿ ಕೈ ಮುಗಿದರು.**

ರಾಣೇಬೆನ್ನೂರು,ಮಾ.24- ಉಕ್ರೇನ್‌ನಲ್ಲಿ ಮೃತಪಟ್ಟ ತಾಲ್ಲೂಕಿನ ಚಳಗೇರಿ ಗ್ರಾಮದ ನವೀನ್ ಮನೆಗೆ ರಾಜ್ಯಪಾಲ ಥಾವರ್‌ಚಂದ್ ಗೆಹ್ಲೋಟ್ ಗುರುವಾರ ಭೇಟಿ ನೀಡಿ, ಆತನ ತಂದೆ-ತಾಯಿಗೆ ಸಾಂತ್ವನ ಹೇಳಿ ಧೈರ್ಯ ತುಂಬಿದರು. ಈ ಸಮಯದಲ್ಲಿ ರಾಜ್ಯಪಾಲರಿಗೆ ನವೀನ್ ಪೋಷಕರು ಶರಬತ್ ನೀಡಿ ಆತಿಥ್ಯ ಮಾಡಿದರು.

ರಾಜ್ಯಪಾಲರು ಅಲ್ಲಿಂದ ನಿರ್ಗಮಿಸಿದ ನಂತರ ನವೀನ್ ತಂದೆ ಶೇಖರಪ್ಪ ಗ್ಯಾನಗೌಡ್ರ ಸುದ್ದಿಗಾರರೊಂದಿಗೆ ಮಾತನಾಡಿ, ಪ್ರತಿಭಾವಂತ ಮಗ ನಿಧನವಾಗಿದ್ದು ಶೋಚನೀಯ ಸಂಗತಿ. ಮಗನ ದೇಹ ಬಂದ ದಿನ ಅವರು ಮಧ್ಯಪ್ರದೇಶದಲ್ಲಿದ್ದ ಕಾರಣ ಏರ್‌ಪೋರ್ಟ್‌ಗೆ ಬರಲು ಸಾಧ್ಯವಾಗಲಿಲ್ಲ. ನಿಮ್ಮ ಕಷ್ಟ, ಸುಖಗಳಿಗೆ ಸದಾ ಸ್ಪಂದಿಸುವೆ. ರಾಜ್ಯಪಾಲ ಹುದ್ದೆ ಮುಗಿದರೂ ಸದಾ ನಿಮ್ಮೊಂದಿಗಿರುವೆ. ಮೈಸೂರಿನಲ್ಲಿ ಸೆಪ್ಟೆಂಬರ್ ತಿಂಗಳಿನಲ್ಲಿ ನವೀನ್ ಸಹೋದರನಿಗೆ ಗೋಲ್ಡ್ ಮೆಡಲನ್ನು ತಾವೇ ಪ್ರದಾನ ಮಾಡಿದ್ದನ್ನು ಸ್ಮರಿಸಿಕೊಂಡರು. ನವೀನ್ ಅಗಲಿಕೆ ಬೇಸರದ ಸಂಗತಿಯಾದರೂ ರಾಜ್ಯ ಹಾಗೂ ದೇಶ ನಿಮ್ಮೊಂದಿಗೆ ಇರುತ್ತದೆ ಎಂದು ರಾಜ್ಯಪಾಲರು ತಮಗೆ ಧೈರ್ಯ ತುಂಬಿದರು ಎಂದು ಶೇಖರಪ್ಪ ವಿವರಿಸಿದರು.

ನವೀನ್ ತಾಯಿ ವಿಜಯಲಕ್ಷ್ಮಿ, ಗ್ರಾಮದ ಕಟಗಿಹಳ್ಳಿಮಠದ ಡಾ.ಮಹಾಂತೇಶ ಸ್ವಾಮಿಗಳು, ಶಾಸಕರ ಪತ್ನಿ ಮಂಗಳಗೌರಿ ಪೂಜಾರ, ಜಿಲ್ಲಾಧಿಕಾರಿ ಎಸ್.ಬಿ.ಶೆಟ್ಟೆಣ್ಣನವರ, ಜಿಪಂ ಸಿಇಒ ಮಹ್ಮದ್‌ರೋಷನ್,ಎಸ್‌ಪಿ ಹನುಮಂತರಾಯಪ್ಪ, ಹೆಚ್ಚುವರಿ ಎಸ್ಪಿ ವಿಜಯಕುಮಾರ್ ಸಂತೋಷ ಮತ್ತಿತರರಿದ್ದರು.

## ಶ್ರೀ ಭೇಟಿ : ಶಾಸಕ ರೆಡ್ಡಿ ಬೆಂಬಲ



ಹರಪನಹಳ್ಳಿ, ಮಾ.24- ವಾಲ್ಮೀಕಿ ಗುರುಪೀಠದ ಶ್ರೀ ಪ್ರಸನ್ನಾನಂದ ಸ್ವಾಮೀಜಿ, ವಾಲ್ಮೀಕಿ ನಾಯಕ ಸಮುದಾಯಕ್ಕೆ ಶೇ. 7.5 ಮೀಸಲಾತಿ ಹೆಚ್ಚಳ ಸೇರಿದಂತೆ ವಿವಿಧ ಬೇಡಿಕೆಗಳನ್ನು ಈಡೇರಿಸುವಂತೆ ಬೆಂಗಳೂರಿನ ಫ್ರೀಡಂ ಪಾರ್ಕ್‌ನಲ್ಲಿ ಕೈಗೊಂಡಿರುವ ಧರಣಿ ಸತ್ಯಾಗ್ರಹದಲ್ಲಿ ಶಾಸಕ ಕರುಣಾಕರ ರೆಡ್ಡಿ ಭಾಗವಹಿಸಿ, ಬೆಂಬಲ ವ್ಯಕ್ತ ಪಡಿಸಿದರು.

ಗ್ರಾಮ ಪಂಚಾಯಿತಿ ಮಾಜಿ ಸದಸ್ಯ ಬಾಲೇನಹಳ್ಳಿ ಜಿ.ಕೆಂಚನಗೌಡ, ಜಿಲ್ಲಾ ಬಿಜೆಪಿ ಎಸ್.ಟಿ ಘಟಕದ ಕಾರ್ಯದರ್ಶಿ ಆರ್. ಲೋಕೇಶ್, ಮುಖಂಡರುಗಳಾದ ಕೆ. ಲಿಂಗಾನಂದ, ಕೆ. ಎಂ. ಪ್ರಾಣೇಶ, ಶಿರಗಾನಳ್ಳಿ ವಿಶ್ವನಾಥ್, ನಾಗರಾಜ ರಾಂಪುರ, ದಾದಾಪುರ ಶಿವಾನಂದ, ಚೌಡಾಪುರ ಷಣ್ಮುಖಪ್ಪ, ನಂದಿಬೇವೂರು ರಾಜಪ್ಪ, ಗುಂಡಗತ್ತಿ ಅರವಿಂದ, ನಂದಿಬೇವೂರು ಮಾರುತಿ, ಕಡತಿ ರಮೇಶ, ಅಲಮರಸಿಕೇರಿ ಗೋಣೆಪ್ಪ ಸೇರಿದಂತೆ ಇತರರು ಇದ್ದರು.

# ಬಡವರ ಹೊಟ್ಟೆ ಮೇಲೆ ಹೊಡೆದ ಬಿಜೆಪಿ ಸರ್ಕಾರ : ಇಂದಿರಾ ಕ್ಯಾಂಟೀನ್ ಬಂದ್...!



ದಾವಣಗೆರೆ, ಮಾ.24- ಇಂದಿರಾ ಕ್ಯಾಂಟೀನ್, ಸಿದ್ದರಾಮಯ್ಯ ಅವರು ಮುಖ್ಯಮಂತ್ರಿಯಾಗಿದ್ದಾಗ ಬಡವರ ಹೊಟ್ಟೆ ತುಂಬಿಸಲು ಆರಂಭಿಸಿದ ಮಹತ್ವಾಕಾಂಕ್ಷೆಯ ಯೋಜನೆ. ಆದರೆ ನಗರದಲ್ಲಿ ಈಗ ಹಳ್ಳ ಹಿಡಿದಿದೆ. ಮಹಾನಗರ ಪಾಲಿಕೆ ವ್ಯಾಪ್ತಿಯಲ್ಲಿ ಬರುವ ಎಂಟು ಇಂದಿರಾ ಕ್ಯಾಂಟೀನ್‌ಗಳನ್ನು ಮುಚ್ಚಿರುವುದು ಜನರ ಆಕ್ರೋಶಕ್ಕೆ ಕಾರಣವಾಗಿದೆ.

ಕಳೆದ ಹದಿನಾರನೇ ತಾರೀಖಿನಿಂದಲೇ ಇಂದಿರಾ ಕ್ಯಾಂಟೀನ್ ಬಂದ್ ಮಾಡಲಾಗಿದೆ. ಬಡವರು, ಕೂಲಿ ಕಾರ್ಮಿಕರು, ನಿರ್ಗತಿಕರು, ಆಟೋ ರಿಕ್ಷಾ ಚಾಲಕರು ಸೇರಿದಂತೆ ಸಾವಿರಾರು ಮಂದಿ ಕಡಿಮೆ ಹಣದಲ್ಲಿ ಹೊಟ್ಟೆ ತುಂಬಿಸಿಕೊಳ್ಳುತ್ತಿದ್ದರು. ಆದರೆ, ಈಗ ಬಿಜೆಪಿ ಸರ್ಕಾರ ಬಡವರ ಹೊಟ್ಟೆ ಮೇಲೂ ಹೊಡೆ ದಿದೆ ಎಂದು ಸಾರ್ವಜನಿಕರು ಆಕ್ರೋಶ ವ್ಯಕ್ತಪಡಿಸಿದ್ದಾರೆ.

ಪಾಲಿಕೆಯ ವಿರೋಧ ಪಕ್ಷದ ನಾಯಕ ಜಿ. ಎಸ್. ಗಡಿಗುಡಾಳ್ ಮಂಜುನಾಥ್ ನೇತೃತ್ವದಲ್ಲಿ ಇಂದಿರಾ ಕ್ಯಾಂಟೀನ್‌ಗೆ ಭೇಟಿ ಕೊಟ್ಟಾಗ ಅವ್ಯವಸ್ಥೆಯ ಆಗರ ಕಂಡು ಬಂದಿದೆ.

ಇಂದಿರಾ ಕ್ಯಾಂಟೀನ್ ಮುಚ್ಚಿರುವುದರಿಂದಾಗಿ ಅಲ್ಲಿನ ಪಾತ್ರೆಗಳು, ನೀರು ಸಂಗ್ರಹ ಮಾಡುವ ತೊಟ್ಟಿಗಳು, ಆಹಾರ ಹಾಗೇ ಬಿಟ್ಟಿರುವುದರಿಂದ ಪಾತ್ರೆಗಳಲ್ಲಿ ಹುಳುಗಳು ತುಂಬಿಕೊಂಡಿವೆ. ಈ ಬಗ್ಗೆ ವಿಚಾರಿಸಿದರೆ ಸರಿಯಾದ ಮಾಹಿತಿಯೂ ಲಭ್ಯವಾಗಿಲ್ಲ. ಪಾಲಿಕೆಯ ಅಧಿಕಾರಿಗಳನ್ನು ಕೇಳಿದರೆ ಟೆಂಡರ್ ಅವಧಿ ಮುಗಿದಿದೆ. ಮತ್ತೆ ಹೊಸದಾಗಿ ಟೆಂಡರ್ ಕರೆಯಬೇಕು. ಆಮೇಲೆ ಇಂದಿರಾ ಕ್ಯಾಂಟೀನ್ ಆರಂಭಿಸಲಾಗುವುದು ಎಂಬ ಉತ್ತರ ಬರುತ್ತಿದೆ. ಇಂಥ ಜನೋಪಯೋಗಿ ಕಾರ್ಯಕ್ರಮವನ್ನು ಹಳ್ಳ ಹಿಡಿಸಲು ಬಿಜೆಪಿ ಸರ್ಕಾರ ಹೊರಟಿದೆ ಎಂದು ಪಾಲಿಕೆಯ ವಿಪಕ್ಷ ನಾಯಕ ಗಡಿಗುಡಾಳ್ ಮಂಜುನಾಥ್ ಕಿಡಿ ಕಾರಿದ್ದಾರೆ.

ಈ ವೇಳೆ ಮಾತನಾಡಿದ ಪಾಲಿಕೆ ಸದಸ್ಯರುಗಳಾದ ಚಮನ್ ಸಾಬ್ ಹಾಗೂ ಎ. ನಾಗರಾಜ್, ಬಿಜೆಪಿ ಸರ್ಕಾರ ಇಂದಿರಾ ಕ್ಯಾಂಟೀನ್‌ನಲ್ಲಿ ಕಮೀಷನ್ ಪಡೆಯಲು ಹವಣಿಸುತ್ತಿದೆ. ಟೆಂಡರ್ ನೀಡುವಾಗ ಪರ್ಸಂಟೇಜ್ ನಿರೀಕ್ಷೆ ಮಾಡುತ್ತಿರುವುದರಿಂದಲೇ ಮುಚ್ಚಲಾಗಿದೆ ಎಂದು ಗಂಭೀರ ಆರೋಪ ಮಾಡಿದ್ದಾರೆ.

ಈ ವೇಳೆ ಕಾಂಗ್ರೆಸ್ ಮುಖಂಡರಾದ ಜಾಕೀರ್ ಆಲಿ, ಕೊಟ್ರಯ್ಯ ಮತ್ತಿತರರು ಹಾಜರಿದ್ದರು.

# ಶ್ರೀ ಎಲಿಸವ್ವ ಜಾನಪದ ಕಲಾ ತಂಡದಿಂದ ಮಹಿಳಾ ದಿನಾಚರಣೆ



ದಾವಣಗೆರೆ, ಮಾ.24 - ನಗರದ ಗಂಗಾಮತಸ್ಥ ಸಮಾಜದ ಕಚೇರಿಯಲ್ಲಿ ಶ್ರೀ ಎಲಿಸವ್ವ ಜಾನಪದ ಕಲಾ ತಂಡದಿಂದ ಅಂತರರಾಷ್ಟ್ರೀಯ ಮಹಿಳಾ ದಿನಾಚರಣೆಯನ್ನು ಸಂಸ್ಥಾಪಕರಾದ ಶ್ರೀಮತಿ ಮೀನಾಕ್ಷಿ ವೆಂಕಟೇಶ್ ಅಧ್ಯಕ್ಷತೆಯಲ್ಲಿ ಆಚರಿಸಲಾಯಿತು.

ಪಾಲಿಕೆ ಸದಸ್ಯರಾದ ಶ್ರೀಮತಿ ಉಮಾ ಪ್ರಕಾಶ್ ಕಾರ್ಯಕ್ರಮ ಉದ್ಘಾಟಿಸಿ ಮಾತನಾಡಿದರು. ಸರ್ಕಾರವು ಮಹಿಳೆಯರಿಗಾಗಿ ಹಲವಾರು ಯೋಜನೆಗಳನ್ನು ಜಾರಿಗೊಳಿಸಿದ್ದು, ಅವುಗಳನ್ನು ಸದ್ಬಳಕೆ ಮಾಡಿಕೊಂಡು ಮಹಿಳೆಯರು ಇನ್ನಷ್ಟು ಅಭಿವೃದ್ಧಿ ಸಾಧಿಸಬೇಕು. ಮಹಿಳೆಯರು ಎಲ್ಲದರಲ್ಲೂ ಅಚ್ಚುಕಟ್ಟುತನ. ತಾಯಿ, ತಂಗಿ, ಪತ್ನಿ, ಸಹೋದರಿ, ಗೆಳತಿಯಾಗಿ ಎಲ್ಲವನ್ನೂ ನಿರ್ವಹಿಸುವ ಮಹಿಳೆ ನಿಜವಾದ ಸಾಧಕಿ. ಆಕೆಗೆ ಎಷ್ಟು ಗೌರವ ಕೊಟ್ಟರೂ ಸಾಲದು. ಮಹಿಳೆಗೆ ಇನ್ನೊಂದು ಹೆಸರೇ ಪ್ರಾಮಾಣಿಕತೆ ಎಂದರು.

ವಜ್ರೇಶ್ವರಿ ಮಹಿಳಾ ಮಂಡಳಿ ಸಂಸ್ಥಾಪಕರಾದ ವಿಜಯ ಅಕ್ಕಿ, ಅಧ್ಯಕ್ಷತೆ ವಹಿಸಿದ್ದ ಮೀನಾಕ್ಷಿ ವೆಂಕಟೇಶ್ ಮಾತನಾಡಿದರು. ಶ್ರೀಮತಿ ಡಾ. ಅನುಷಾ ದರ್ಶನ್, ಸುನೀತಾ ಪ್ರಕಾಶ್ ಅವರುಗಳು ಮುಖ್ಯ ಅತಿಥಿಗಳಾಗಿ ಆಗಮಿಸಿದ್ದರು.

ಶೋಭಾ ಮಂಜುನಾಥ್ ಪ್ರಾರ್ಥಿಸಿದರು. ಸುಧಾ ಸ್ವಾಗತಿಸಿದರು. ಉಪನ್ಯಾಸಕಿ, ಕಸಾಪ ತಾಲ್ಲೂಕು ಅಧ್ಯಕ್ಷರಾದ ಪ್ರೊ. ಸುಮತಿ ಜಯ್ಯಪ್ಪ ಕಾರ್ಯಕ್ರಮ ನಿರೂಪಿಸಿದರು. ಸುಜಾತ ನಾಗೇಶ್, ಚಂದ್ರಿಕ ಜಗನ್ನಾಥ್, ಮಂಗಳ ಮಲ್ಲಿಕಾರ್ಜುನ್, ಶೈಲಜಾ, ಸುಮ ಮತ್ತು ಇತರರು ಕಾರ್ಯಕ್ರಮದಲ್ಲಿ ಭಾಗವಹಿಸಿದ್ದರು.

# ಪಾಲಿಕೆ ಆಯುಕ್ತ ಮುದಜ್ಜಿಗೆ ಸನ್ಮಾನ



ದಾವಣಗೆರೆ, ಮಾ.24- ಸರ್ಕಾರದ ಕೆಲಸ ದೇವರ ಕೆಲಸ ಎಂದು ಹೇಳುತ್ತೇವೆ. ಆದರೆ ಎಲ್ಲಾ ಅಧಿಕಾರಿಗಳು ದೇವರ ಕೆಲಸ ಎಂದು ಮಾಡುವುದು ಅಪರೂಪ. ಇದಕ್ಕೆ ಅಪವಾದ ವೆಂಬಂತೆ ನಗರ ಪಾಲಿಕೆಯ ಆಯುಕ್ತ ವಿಶ್ವನಾಥ್ ಮುದಜ್ಜಿ ಅವರು ಮಾದರಿಯಾಗಿ ಸಾರ್ವಜನಿಕರ ಸೇವೆ ಮಾಡುತ್ತಿದ್ದಾರೆ ಎಂದು ಬಾಡದ ಆನಂದರಾಜ್ ಮೆಚ್ಚುಗೆ ವ್ಯಕ್ತಪಡಿಸಿದರು.

ಪಾಲಿಕೆ ಆಯುಕ್ತರಾಗಿ ಎರಡು ವರ್ಷ ಪೂರೈಸಿದ ಹಿನ್ನೆಲೆಯಲ್ಲಿ ಸಂಘ, ಸಂಸ್ಥೆಗಳ ಮುಖಂಡರುಗಳು ಅಭಿಮಾನದಿಂದ ಸನ್ಮಾನಿಸಿದ ಸಂದರ್ಭದಲ್ಲಿ ಅವರು ಮಾತನಾಡಿದರು.

ಕಾಂಗ್ರೆಸ್ ಎಸ್ಸಿ ಘಟಕದ ರಾಜ್ಯ ಪ್ರಧಾನ ಕಾರ್ಯದರ್ಶಿ ಸೋಮಲಾಪುರ ಹನುಮಂತಪ್ಪ ಮಾತನಾಡಿ, ಪೌರ ಕಾರ್ಮಿಕರ ಬಗ್ಗೆ ವಿಶೇಷ ಕಾಳಜಿ ಹೊಂದಿರುವ ಮುದಜ್ಜಿ ಅವರು ತಿಂಗಳಿಗೆ ಸರಿಯಾಗಿ ವೇತನ ಸಿಗುವಂತೆ ಮಾಡಿದ್ದಾರೆ. ನಿವೃತ್ತಿ ಹೊಂದಿದ ಪೌರ ಕಾರ್ಮಿಕರಿಗೆ ಸಿಗಬೇಕಾದ ಸೌಲಭ್ಯ ಕೊಡಿಸುವಲ್ಲಿ ಮಹತ್ವದ ಪಾತ್ರ ವಹಿಸಿದ್ದಾರೆ ಎಂದು ಶ್ಲಾಘಿಸಿದರು.

ಈ ವೇಳೆ ನಗರ ಪಾಲಿಕೆ ಸದಸ್ಯ ಶಿವನಗೌಡ ಪಾಟೀಲ್, ಬಿಜೆಪಿ ಹಿರಿಯ ಮುಖಂಡ ಕೊಂಡಜ್ಜಿ ಜಯ ಪ್ರಕಾಶ್, ಮಹಂತೇಶ್ ಒಣರೊಟ್ಟಿ, ಡಿಎಸ್ಸೆಸ್ ಮುಖಂಡ ಟಿ. ಬಸವರಾಜ್, ಉಪ್ಪಾರ ಯುವ ವೇದಿಕೆ ಜಿಲ್ಲಾಧ್ಯಕ್ಷ ಎನ್ ಬಿ ಎ.ಲೋಕೇಶ್, ರಮೇಶ್ ನಾಯ್ಕ್, ತಿಪ್ಪೇಸ್ವಾಮಿ ಮತ್ತು ಇತರರು ಮುದಜ್ಜಿ ಅವರನ್ನು ಅಭಿನಂದಿಸಿದರು.

## ಹರಿಹರದ ಗ್ರಾಮ ದೇವತೆ ಜಾತ್ರೆ : ಇಂದು ನಾಟಕ, ಕುಸ್ತಿ

ಜಾತ್ರೆ ಮನರಂಜನಾ ಸಮಿತಿ ವತಿಯಿಂದ ನಗರದ ಗಾಂಧಿ ಮೈದಾನದಲ್ಲಿ ಇಂದು ರಾತ್ರಿ 9 ಕ್ಕೆ 'ಕುಂಟ ಕೋಣ ಮೂಕ ಜಾಣ' ಹಾಸ್ಯಮಯ ನಾಟಕ ಏರ್ಪಡಿಸಲಾಗಿದೆ. ಡಿ.ಆರ್.ಎಂ. ಶಾಲೆ ಮೈದಾನದಲ್ಲಿ ಕುಸ್ತಿ ಪಂದ್ಯಗಳಿಗೆ ಬೆಳಿಗ್ಗೆ 10 ಕ್ಕೆ ಚಾಲನೆ ನೀಡಲಾಗುತ್ತದೆ.

## ಸೈಕಲ್ ಏರಿದ ಅಧಿಕಾರಿಗಳ ತಂಡ

**(1ನೇ ಪುಟದಿಂದ)** ಗಡಿಯಾರ ಕಂಬದ ವೃತ್ತದಿಂದ ಆರಂಭವಾದ ಸೈಕಲ್ ಜಾಥಾಕ್ಕೆ ಜಿಲ್ಲಾಧಿಕಾರಿ ಮಹಾಂತೇಶ ಬೀಳಗಿ ಹಾಗೂ ಜಿಲ್ಲಾ ಪಂಚಾಯತ್ ಮುಖ್ಯ ಕಾರ್ಯನಿರ್ವಹಣಾಧಿಕಾರಿ ಡಾ. ಚನ್ನಪ್ಪ ಹಸಿರು ನಿಶಾನೆ ತೋರಿಸುವ ಮೂಲಕ ಚಾಲನೆ ನೀಡಿದರು.

ಜಾಥಾವು ನಿಜಲಿಂಗಪ್ಪ ಬಡಾವಣೆಯಿಂದ ಶಿವಾಲಿ ಟಾಕೀಸ್ ರೋಡ್, ಹೊಂಡದ ಸರ್ಕಲ್, ದೊಡ್ಡ ಪೇಟೆ ಮಾರ್ಗವಾಗಿ ಜಿಲ್ಲಾಸ್ಪತ್ರೆಯವರೆಗೆ ಸಾಗಿತು.

ಈ ಜಾಥಾದಲ್ಲಿ ಜಿಲ್ಲಾ ಆರೋಗ್ಯಾಧಿಕಾರಿ ಡಾ. ನಾಗರಾಜ್, ನಗರ ಪಾಲಿಕೆ ಆಯುಕ್ತ ವಿಶ್ವನಾಥ್ ಮುದಜ್ಜಿ, ಜಿಲ್ಲಾಸ್ಪತ್ರೆ ಅಧೀಕ್ಷಕ ಎಸ್. ಷಣ್ಮುಖಪ್ಪ, ಮಹಿಳಾ ಮತ್ತು ಮಕ್ಕಳ ಆಸ್ಪತ್ರೆಯ ಅಧೀಕ್ಷಕ ಡಾ. ನೀಲಕಂಠ ನಾಯ್ಕ್, ಜಿಲ್ಲಾ ಮಲೇರಿಯಾಧಿಕಾರಿ ಡಾ. ಕೆ. ನಟರಾಜ್, ಡಿಹೆಚ್ಒ ಡಾ. ನಾಗರಾಜ್, ಜಿಲ್ಲಾ ಕುಷ್ಠರೋಗ ನಿವಾರಣಾಧಿಕಾರಿ ಡಾ. ಪಿ.ಡಿ. ಮುರುಳೀಧರ್, ಜಿಲ್ಲಾ ಆಯುಷ್ ಅಧಿಕಾರಿ ಡಾ. ಶಂಕರ್ ಗೌಡ ಹಾಗೂ ಜಿಲ್ಲಾ ಕ್ಷಯರೋಗ ನಿರ್ಮೂಲನಾಧಿಕಾರಿಗಳು ಮತ್ತು ಎನ್ ಟಿಇಪಿ ತಂಡದವರು ಭಾಗವಹಿಸಿದ್ದರು.

## ಅವಕಾಶ ಇಲ್ಲ

**(1ನೇ ಪುಟದಿಂದ)** ರೂಲ್ ಆಫ್ ಲಾ ದಲ್ಲಿ ನಡೆಯಲಿದೆ. 2002 ರಲ್ಲಿ ಧಾರ್ಮಿಕ ದತ್ತಿ ಕಾಯ್ದೆಯಲ್ಲಿ ದೇವಸ್ಥಾನ ಸ್ವತ್ತನ್ನು ಹಿಂದೂಗಳಲ್ಲದವರ ಬಳಕೆಗೆ ಅವಕಾಶ ನೀಡತಕ್ಕದ್ದಲ್ಲ ಎಂದು ತಿದ್ದುಪಡಿ ಮಾಡಲಾಗಿದೆ. ಈಗ ಧಾರ್ಮಿಕ ಸಂಸ್ಥೆಯವರು ಅದನ್ನು ಜಾರಿ ಮಾಡುತ್ತಿದ್ದಾರೆ. ದೇವಸ್ಥಾನಗಳ ಆಡಳಿತ ಮಂಡಳಿಗಳ ಕ್ರಮ ಕಾನೂನು ವಿರುದ್ಧವಲ್ಲ ಎಂದು ಸ್ಪಷ್ಟಪಡಿಸಿದರು.

ಒಂದು ವೇಳೆ ದೇವಸ್ಥಾನದ ಆವರಣದಲ್ಲಿ ಅಲ್ಲದೆ ಬೇರೆ ಜಾಗದಲ್ಲಿ ವ್ಯಾಪಾರಕ್ಕೆ ಅಡ್ಡಿ ಪಡಿಸಿದ್ದರೆ ಸರ್ಕಾರ ಕ್ರಮ ಕೈಗೊಳ್ಳಲಿದೆ. ದೇವಸ್ಥಾನದ ಆವರಣದಲ್ಲಿ ಕಾನೂನು ಬಳಕೆಗೆ ವಿರೋಧ ವ್ಯಕ್ತಪಡಿಸಲು ಸಾಧ್ಯವಿಲ್ಲ. ಕಾನೂನಿನ ಪ್ರಕಾರ ಆ ಸಂಸ್ಥೆಗಳ ವಿರುದ್ಧ ಕ್ರಮ ಜರುಗಿಸಲು ಅವಕಾಶವಿಲ್ಲ ಎಂದರು.

ಸಲೀಂ ಅಹ್ಮದ್, ನಜೀರ್ ಅಹ್ಮದ್, ಅಲ್ಪಸಂಖ್ಯಾತರ ವ್ಯಾಪಾರಕ್ಕೆ ಅಡ್ಡಿ ಪಡಿಸುವುದು ಬೇರೆ ಜಾಗಕ್ಕೂ ವಿಸ್ತರಿಸುತ್ತಿದೆ ಎಂದರು.

## ನಂದಿಗುಡಿ : ಸಭೆ

ನಂದಿಗುಡಿ ಬೃಹನ್ಮಠದ ಅಭಿವೃದ್ಧಿಗಾಗಿ ಮಾಜಿ ಸಿಎಂ ಯಡಿಯೂರಪ್ಪ ಅವರು ರಾಜ್ಯ ಸರ್ಕಾರದಿಂದ 2 ಕೋಟಿ ರೂ ಅನುದಾನ ಬಿಡುಗಡೆ ಮಾಡಿಸಿದ್ದು, ಬೃಹನ್ಮಠದಲ್ಲಿ ಕೈಗೊಳ್ಳಬಹುದಾದ ಯೋಜನೆ ಕುರಿತು ಚರ್ಚಿಸಲು ಇಂದು ಬೆಳಿಗ್ಗೆ 11 ಕ್ಕೆ ಸಭೆ ಯನ್ನು ಶ್ರೀ ಸಿದ್ಧರಾಮೇಶ್ವರ ಶಿವಾಚಾರ್ಯ ಮಹಾಸ್ವಾಮೀಜಿ ಸಾನ್ನಿಧ್ಯದಲ್ಲಿ ಕರೆಯಲಾಗಿದೆ.


## ಮಾದರಿ ಶಾಲೆ

**(1ನೇ ಪುಟದಿಂದ)** ಗುಣಮಟ್ಟ ಸುಧಾರಿಸಲು ಗಮನ ಹರಿಸಲಾಗುವುದು ಎಂದರು. ಮಕ್ಕಳ ಸಂಖ್ಯೆ, ಅವಶ್ಯಕತೆ ಹಾಗೂ ಅನುದಾನ ಲಭ್ಯತೆಗೆ ಅನುಗುಣವಾಗಿ ಮೂಲಸೌಕರ್ಯ ಒದಗಿಸಲಾಗುವುದು ಎಂದರು.

## ಕೌಶಲ್ಯ ತರಬೇತಿಗೆ ಸಂದರ್ಶನ

ದಾವಣಗೆರೆ, ಮಾ.24- ಕೆನರಾ ಬ್ಯಾಂಕ್ ಗ್ರಾಮೀಣ ಸ್ವ-ಉದ್ಯೋಗ ತರಬೇತಿ ಸಂಸ್ಥೆ, ರೇಷ್ಮೆ ಇಲಾಖೆ ಆವರಣ, ಹಳೇ ತೋಳಹುಣಸೆ ಹಾಗು ಜಿಲ್ಲಾ ಪಂಚಾಯತ್ ಇವರ ಸಂಯುಕ್ತ ಆಶ್ರಯದಲ್ಲಿ ಜಿಲ್ಲೆಯ ಗ್ರಾಮೀಣ ಮಟ್ಟದ ಯುವಕ, ಯುವತಿಯರಿಗೆ ಕೌಶಲ್ಯ ತರಬೇತಿ ಕಾರ್ಯಕ್ರಮ ಹಮ್ಮಿಕೊಳ್ಳಲಾಗಿದೆ.

ಆಸಕ್ತರು ನಾಡಿದ್ದು ದಿನಾಂಕ 26ರಂದು ಸಂದರ್ಶನದಲ್ಲಿ ಪಾಲ್ಗೊಳ್ಳಬೇಕು. ವಿವರಕ್ಕೆ ಸಂಪರ್ಕಿಸಿ : 79751 39332, 70199 80484, 99641 11314, 95383 95817, 94819 77076.



**ಪುರಸಭಾ ಕಾರ್ಯಾಲಯ, ಹರಪನಹಳ್ಳಿ - 583131, ವಿಜಯನಗರ ಜಿಲ್ಲೆ.**
ಕರ್ನಾಟಕ ಸರ್ಕಾರ
ದೂರವಾಣಿ ಸಂಖ್ಯೆ : 08398 - 280258
ಫ್ಯಾಕ್ಸ್ : 08398 280581
Email: itstaff_ulb_harapanahalli@yahoo.com
Website : harapanahallitown.mrc.gov.in

ಕ್ರ.ಸಂ: ಪುಸ:ಹ.ಹಳ್ಳಿ/ಕಂ.ಶಾ/ಸಿಆರ್/2021-22 ದಿನಾಂಕ: 14.03.2022

### ಸಾರ್ವಜನಿಕ ಪ್ರಕಟಣೆ

ಈ ಮೂಲಕ ಷೆಡ್ಯೂಲ್ ಆಸ್ತಿಯ ಅಕ್ಕ-ಪಕ್ಕದ ಮತ್ತು ವಾರಸುದಾರರಿಗೆ ತಿಳಿಯಪಡಿಸುವುದೇನೆಂದರೆ. ಪುರಸಭಾ ವ್ಯಾಪ್ತಿಯ ವಾರ್ಡ್ ನಂ. 10, ಗೌಳೇರಕೇರಿ ಪ್ರದೇಶದಲ್ಲಿ ಬರುವ ಸ್ವತ್ತಿನ ಮಾಲೀಕರಾದ **ಶ್ರೀ ಉಗಮರಾಜ** ಇವರ ಹೆಸರಿನಲ್ಲಿರುವ **ಡೋರ್ ನಂಬರ್ : 130/1/1781/1ರ ಸ್ವತ್ತಿನ ಅಳತೆ (41 1/2 +36) /2x 541/2 ಅಡಿಗಳುಳ್ಳ** ಖಾಲಿ ನಿವೇಶನದ ಮಾಹಿತಿಯು ಕಚೇರಿಯ ಡಿಮ್ಯಾಂಡ್ ರಿಜಿಸ್ಟಾರ್‌ನಲ್ಲಿ ಮಾತ್ರ ನಮೂದು ಇದ್ದು, ಮುಂದಿನ ಯಾವುದೇ ವಹಿಯಲ್ಲಿ ನಮೂದಾಗಿರುವುದಿಲ್ಲ. ಈ ಸಂಬಂಧ ಅರ್ಜಿದಾರರು ಸಲ್ಲಿಸಿರುವ ನೋಂದಾಯಿತ ದಾಖಲೆಗಳ ಪ್ರಕಾರ ಹಾಗೂ ಸ್ಥಳ ಮಹಜರ್ ಸಂದರ್ಭದಲ್ಲಿ ಲಭ್ಯವಾದ ಮಾಹಿತಿ ಆಧಾರದ ಮೇಲೆ ಅರ್ಜಿದಾರರ ಕೋರಿಕೆಯಂತೆ ಖಾತೆ ಸಂಖ್ಯೆಯನ್ನು ಚಾಲ್ತಿ ವಹಿಯಲ್ಲಿ ದಾಖಲಿಸಿ, ಮುಂದುವರೆಸುವ ಕುರಿತು ಅಕ್ಕ-ಪಕ್ಕದವರಿಂದ ಏನಾದರು ಆಕ್ಷೇಪಣೆಗಳು / ಸಲಹೆ ಸೂಚನೆಗಳು ಇದ್ದಲ್ಲಿ ಪ್ರಕಟಣೆ ಹೊರಡಿಸಿದ ದಿನಾಂಕದಿಂದ 30 ದಿನದೊಳಗಾಗಿ ಸಲ್ಲಿಸತಕ್ಕದ್ದು, ಒಂದು ವೇಳೆ ನಿಗದಿ ಅವಧಿಯೊಳಗೆ ಯಾವುದೇ ಆಕ್ಷೇಪಣೆಗಳು ಸ್ವೀಕೃತಗೊಳ್ಳದೇ ಇದ್ದಲ್ಲಿ ಅರ್ಜಿದಾರರ ಕೋರಿಕೆಯಂತೆ ನಿಯಮಾನುಸಾರ ಕ್ರಮ ವಹಿಸಲಾಗುವುದು.

### ಷೆಡ್ಯೂಲ್

| ಕ್ರ.ಸಂ. | ಆಸ್ತಿ ಸಂಖ್ಯೆ | ಸ್ಥಳದಲ್ಲಿ ಲಭ್ಯವಾದ ಅಳತೆ | ಚೆಕ್ಕುಬಂದಿ | |
|---|---|---|---|---|
| 1 | 130/1/1781/1 | ಪೂ.ಪ: ( (41 1/2 +36) /2x ಉದ್ದ: 541/2 ಅಡಿಗಳು | ಪೂ: | ಬಂಕಾಪುರದ ಹನುಮಂತಪ್ಪ ಅಂಡ್ ಸನ್ಸ್ ಇವರ ಜಾಗ |
| | | | ಪ: | ಗಂಗಾವತಿ ಹನುಮಂತಪ್ಪನವರ ಜಾಗ |
| | | | ಉ: | ಷೆಡ್ಯೂಲ್ ಜಾಗಕ್ಕೆ ಹೊಂದಿಕೊಂಡಿರುವ (ಪೂ.ಪ. 26 ಅಡಿ x ಉದ್ದ 22 ಅಡಿ) ಬಯಲು ಜಾಗ |
| | | | ದ: | ದಾರಿ |

**ಮುಖ್ಯಾಧಿಕಾರಿಗಳು** ಪುರಸಭೆ, ಹರಪನಹಳ್ಳಿ.




# ಗಂಡನೇ ಆಗಿದ್ದರೂ ಪತ್ನಿಯ ಅತ್ಯಾಚಾರದ ದೂರು ಎದುರಿಸಬೇಕು

## ಹೈಕೋರ್ಟ್ ತೀರ್ಪಿನ ಬಗ್ಗೆ ಮಿಶ್ರ ಅಭಿಪ್ರಾಯ

ನವದೆಹಲಿ, ಮಾ. 24 – ಗಂಡನಾಗಿದ್ದರೂ ಸಹ, ಹೆಂಡತಿ ಅತ್ಯಾಚಾರದ ದೂರು ದಾಖಲಿಸಿದರೆ ಪ್ರಕರಣ ಎದುರಿಸಲೇಬೇಕು ಎಂದು ಕರ್ನಾಟಕ ಹೈಕೋರ್ಟ್ ನೀಡಿರುವ ತೀರ್ಪು ಚರ್ಚೆಗೆ ಕಾರಣವಾಗಿದೆ. ಭಾರತೀಯ ದಂಡ ಸಂಹಿತೆಯ 375ನೇ ಸೆಕ್ಷನ್‌ನಲ್ಲಿ ಅತ್ಯಾಚಾರ ವ್ಯಾಖ್ಯಾನಿಸಲಾಗಿದೆ. ಗಂಡ–ಹೆಂಡತಿ ಸಂಬಂಧವನ್ನು ಈ ಸೆಕ್ಷನ್‌ನಿಂದ ಹೊರಗಿಡಲಾಗಿದೆ.

ಗಂಡನ ಮೇಲೂ ಹೆಂಡತಿ ಅತ್ಯಾಚಾರ ಪ್ರಕರಣ ದಾಖಲಿಸಲು ಅನುಮತಿ ಕೋರಿರುವ ಅರ್ಜಿಯ ವಿಚಾರಣೆ, ದೆಹಲಿ ಹೈಕೋರ್ಟ್‌ನಲ್ಲಿ ನಡೆಯುತ್ತಿದೆ. ಫೆಬ್ರವರಿಯಲ್ಲಿ ವಿಚಾರಣೆ ನಡೆಸಲಾಗಿದ್ದು, ತೀರ್ಪು ಕಾಯ್ದಿರಿಸಲಾಗಿದೆ.

ಕರ್ನಾಟಕ ಹೈಕೋರ್ಟ್ ಇದೇ ರೀತಿಯ ಪ್ರಕರಣದಲ್ಲಿ ತೀರ್ಪು ನೀಡಿದ್ದು, ಗಂಡ ಪ್ರಕರಣದಿಂದ ತಪ್ಪಿಸಿಕೊಳ್ಳಲಾಗದು ಎಂದು ಹೇಳಿದೆ.

ಹೈಕೋರ್ಟ್ ತೀರ್ಪು ಸ್ವಾಗತಿಸುವುದಾಗಿ ಹೇಳಿರುವ ಆರ್.ಐ.ಟಿ. ಫೌಂಡೇಷನ್ ಪ್ರತಿನಿಧಿಯಾಗಿರುವ ವಕೀಲ ರಾಘವ್ ಅವಸ್ತಿ, ಈ ಬಗ್ಗೆ ದೇಶದಲ್ಲಿ ಅರಿವು ಮೂಡಬೇಕಿದೆ ಎಂದಿದ್ದಾರೆ.

375ನೇ ಸೆಕ್ಷನ್‌ನಲ್ಲಿ ನೀಡಲಾಗಿರುವ ವಿನಾಯಿತಿಯನ್ನು ತೆಗೆದು ಹಾಕಲು ಇತ್ತೀಚಿನ ದಿನಗಳಲ್ಲಿ ಒತ್ತಡ ಹೆಚ್ಚಾಗುತ್ತಿದೆ. ಇತ್ತೀಚಿನ ತೀರ್ಪು ದೇಶದಲ್ಲಿ ಮತ್ತೊಂದು ಕರಾಳ ಕಾನೂನು ತರಲಿದೆ ಎಂದು ಮೆನ್ಸ್ ವೆಲ್‌ಫೇರ್ ಟ್ರಸ್ಟ್ ಪ್ರತಿನಿಧಿ ಅಮಿತ್ ಲಖಾನಿ ಹೇಳಿದ್ದಾರೆ.

ಇದು ಹಲವಾರು ವಿಧಗಳಲ್ಲಿ ಕಾನೂನು ಬಾಹಿರವಾಗಿದೆ. ಅಷ್ಟೇ ಅಲ್ಲದೇ, ಮದುವೆ ವಿಫಲವಾದ ಸಂದರ್ಭದಲ್ಲಿ ಹೆಂಡತಿ ಲಾಭ ಪಡೆಯಲು ಅವಕಾಶ ಮಾಡಿಕೊಡುತ್ತದೆ. ಆರೋಪಕ್ಕೆ ಸಿಲುಕಿದ ಗಂಡ ಜೈಲಿಗೆ ಹೋಗುತ್ತಾನೆ, ಕೆಲಸ ಕಳೆದುಕೊಳ್ಳುತ್ತಾನೆ, ಮಕ್ಕಳು, ಹಣ, ಗೌರವ ಕಳೆದುಕೊಳ್ಳುತ್ತಾನೆ. ವರ್ಷಗಳ ವಿಚಾರಣೆ ನಂತರ ನಿರ್ದೋಷಿ ಎಂದು ಸಾಬೀತಾದರೂ, ಅತ್ಯಾಚಾರಿ ಎಂಬ ಹಣೆಪಟ್ಟಿ ಕಟ್ಟಿಕೊಳ್ಳುವುದು ತಪ್ಪುವುದಿಲ್ಲ ಎಂದವರು ಹೇಳಿದ್ದಾರೆ.

ಈ ತೀರ್ಪಿನಿಂದ ನ್ಯಾಯಾಲಯ ಶಾಸಕಾಂಗದ ವಲಯದಲ್ಲಿ ಕಾಲಿರಿಸಿದಂತಾಗುತ್ತದೆ. ಇದು ನ್ಯಾಯಿಕ ಮಿತಿಗಳನ್ನು ದಾಟಿದಂತೆ ಎಂದವರು ಹೇಳಿದ್ದಾರೆ. ಮಾರ್ಚ್ 23ರಂದು ತೀರ್ಪು ನೀಡಿದ್ದ ಕರ್ನಾಟಕ ಹೈಕೋರ್ಟ್, ಗಂಡ ಎಂಬ ಕಾರಣಕ್ಕಾಗಿ ವ್ಯಕ್ತಿ ಅತ್ಯಾಚಾರ ವಿಚಾರಣೆಯಿಂದ ತಪ್ಪಿಸಿಕೊಳ್ಳಲಾಗದು. ಇದು ಸಮಾನತೆಗೆ ವಿರುದ್ಧವಾಗಿದೆ ಎಂದು ತಿಳಿಸಿತ್ತು.

# ಪಂಚಮಸಾಲಿ ಪೀಠಕ್ಕೆ ರಾಜ್ಯಪಾಲರ ಭೇಟಿ




ಹರಿಹರ,ಮಾ.24- ರಾಜ್ಯಪಾಲ ತಾವರ್ ಚಂದ್ ಗೆಹ್ಲೋಟ್ ಅವರು ಇಲ್ಲಿನ ವೀರಶೈವ ಲಿಂಗಾಯತ ಪಂಚಮಸಾಲಿ ಪೀಠಕ್ಕೆ ಇಂದು ಭೇಟಿ ನೀಡಿದ್ದರು. ಶ್ರೀ ವಚನಾನಂದ ಜಗದ್ಗುರುಗಳು ರಾಜ್ಯಪಾಲರನ್ನು ಆತ್ಮೀಯವಾಗಿ ಸ್ವಾಗತಿಸಿದರು.

ರಾಜ್ಯಪಾಲರು ಇಲ್ಲಿಯ ವಾತಾವರಣವನ್ನು ಕಂಡು ಸಂತಸಪಟ್ಟರು. ಈ ಕ್ಷೇತ್ರದಲ್ಲಿ ಇರುವಂತಹ ವಾತಾವರಣ ಸಿಖ್ ಸಂಪ್ರದಾಯದ ಗುರುದ್ವಾರದಲ್ಲಿ ಕಂಡುಬರುವಂತಹ ವಾತಾವರಣವಾಗಿದೆ ಎಂದು ಖುಷಿ ಪಟ್ಟರು ಎಂದು ಶ್ರೀ ವಚನಾನಂದ ಸ್ವಾಮೀಜಿ ತಿಳಿಸಿದ್ದಾರೆ.

ಶ್ರೀ ಪೀಠದ ಅಭಿವೃದ್ಧಿಗೆ ಕೈಗೊಂಡಿರುವಂತಹ ಕೆಲಸ-ಕಾರ್ಯಗಳ ಬಗ್ಗೆ ಮೆಚ್ಚುಗೆಯನ್ನು ವ್ಯಕ್ತಪಡಿಸಿದರಲ್ಲದೇ, ಮಹಾಯೋಗಿನಿ ಅಕ್ಕಮಹಾದೇವಿ, ಕಿತ್ತೂರಿನ ರಾಣಿ ಚೆನ್ನಮ್ಮ ಮುಂತಾದ ಮಹನೀಯರ ಬಗ್ಗೆ ಹಾಗೂ ಅವರ ಇತಿಹಾಸದ ಬಗ್ಗೆ ತಮ್ಮಿಂದ ಮಾಹಿತಿಯನ್ನು ಪಡೆದುಕೊಂಡು ಅವರ ಕೊಡುಗೆಯನ್ನು ಶ್ಲಾಘಿಸಿದರು ಎಂದು ಜಗದ್ಗುರುಗಳು ವಿವರಿಸಿದ್ದಾರೆ.

# ನಗರದಲ್ಲಿ ಇಂದಿನಿಂದ ಉಚಿತ ಮಜ್ಜಿಗೆ, ನೀರು ವಿತರಣೆ


ಕರುಣಾ ಜೀವ ಕಲ್ಯಾಣ ಟ್ರಸ್ಟ್ ವತಿಯಿಂದ ಹಮ್ಮಿಕೊಂಡಿರುವ ಉಚಿತ ಮಜ್ಜಿಗೆ ಮತ್ತು ನೀರು ವಿತರಣಾ ಕಾರ್ಯಕ್ರಮದ ಪ್ರಾರಂಭೋತ್ಸವವು ಶ್ರೀ ಜಯದೇವ ಮುರುಘರಾಜೇಂದ್ರ ವೃತ್ತದಲ್ಲಿ ಇಂದು ಬೆಳಿಗ್ಗೆ 10.45 ಕ್ಕೆ ನಡೆಯಲಿದೆ. ಶ್ರೀ ಬಸವಪ್ರಭು ಸ್ವಾಮೀಜಿ ಸಾನ್ನಿಧ್ಯ ವಹಿಸುವರು. ಎಲ್.ಎಸ್. ಪ್ರಭುದೇವ್, ಇ.ಎಂ. ಮಂಜುನಾಥ, ಡಾ. ಸಿದ್ಧಪ್ಪ, ಮಂಜುಳಾ ಬಸವಲಿಂಗಪ್ಪ, ಬಸವರಾಜ್ ಒಡೆಯರ್, ಮಧುಸೂದನ್ ಮತ್ತಿತರರು ಮತ್ತಿತರರು ಮುಖ್ಯ ಅತಿಥಿಗಳಾಗಿ ಭಾಗವಹಿಸುವರು.

# ಘಟಿಕೋತ್ಸವದಲ್ಲಿ ಚಿನ್ನ ಪಡೆದವರ ಸಂತಸ


ಯೋಗೀಶ್ ಆರ್.ಎಲ್.


ಸೌಮ್ಯ ಬಿ.ಎನ್.


ಅಂಜನಪ್ಪ ಇ.


ದರ್ಶನ್ ಚಕ್ರಸಾಲಿ


ಹರ್ಷಿತಾ ಎಂ.ವಿ.


ಶೃತಿ ಟಿ.


ಜ್ಯೋತಿ ಎಂ.

(1ನೇ ಪುಟದಿಂದ) ಸಾಧನೆಗೈದ ಹುಡುಗಿಯದು ಮತ್ತೊಂದು ಕಥೆ. ಮನೆಗಳಿಗೆ ಹಾಲು ಹಾಕುತ್ತಾ ಓದಿದ ಯುವಕ, ಅಪ್ಪನ ಕನಸನ್ನು ನನಸಾಗಿದ ಸಂತಸದಲ್ಲಿದ್ದ ಯುವತಿ.. ಹೀಗೆ ಒಬ್ಬೊಬ್ಬರದ್ದೂ ಒಂದೊಂದು ಕುತೂಹಲದ ಕಥೆಗಳು.

**ಕರಣಿ ಹಿಡಿದ ಕೈಯಲ್ಲಿ ಹೊಳೆಯುತ್ತಿದ್ದ ಚಿನ್ನದ ಪದಕ:** ಗಾರೆ ಕೆಲಸ ಮಾಡುತ್ತಲೇ ಹಣ ಹೊಂದಿಸಿಕೊಂಡು ಓದಿದ ಹುಡುಗನ ಕೈಯಲ್ಲಿ ಚಿನ್ನದ ಪದಕ ಹೊಳೆಯುತ್ತಿತ್ತು. ಇಂಗ್ಲಿಷ್ ಸ್ನಾತಕೋತ್ತರ ಪದವಿಯಲ್ಲಿ ಬಂಗಾರದ ಪದಕ ಪಡೆದ ರಜೀಕ್‌ಉಲ್ಲಾ ಶ್ರಮಜೀವಿ. ಕೆಲಸದಲ್ಲಷ್ಟೇ ಅಲ್ಲ, ಓದಿನಲ್ಲೂ ಎನ್ನುವುದನ್ನು ಸಾಬೀತು ಪಡಿಸಿದ್ದ. ಮಲೇಬೆನ್ನೂರು ಗ್ರಾಮದ ರಜೀಕ್‌ಉಲ್ಲಾನ ತಂದೆ ಜಮಾಲ್ದೀನ್ ಸಾಬ್ ಗಾರೆ ಕೆಲಸವನ್ನೇ ವೃತ್ತಿ ಮಾಡಿಕೊಂಡವರು. ತಾಯಿ ಶಕೀಲಾ ಬಾನು ಗೃಹಿಣಿ. ಅಂದಹಾಗೆ ಪ್ರಾಧ್ಯಾಪಕನಾಗುವ ಕನಸು ಹೊತ್ತಿರುವ ಈತ ಪಿಹೆಚ್‌ಡಿ ತಯಾರಿಯಲ್ಲಿದ್ದಾನೆ.

**ಚಿತ್ರ ಬಿಡಿಸುವ ಕೈಯಲ್ಲಿ ಪದಕ:** ಫೈನ್ ಆರ್ಟ್ಸ್ ಕಾಲೇಜಿನಲ್ಲಿ ಓದಿ ಅನ್ವಯಿಕ ಕಲೆ ವಿಭಾಗದಲ್ಲಿ ಪ್ರಥಮ ರ್‍ಯಾಂಕ್ ಪಡೆದ ದರ್ಶನ್ ಚಕ್ರಸಾಲಿ ಚಿನ್ನದ ಪದಕ ಪಡೆದಿದ್ದಾರೆ. 10 ವರ್ಷಗಳ ಹಿಂದೆ ತಂದೆ ಓಂಕಾರಪ್ಪ ಅವರನ್ನು ಕಳೆದುಕೊಂಡಿದ್ದ ಈತನಿಗೆ ತಾಯಿ ಗೀತ ಮನೆಯಲ್ಲಿಯೇ ಟೈಲರಿಂಗ್ ಮಾಡಿ ಮಗನ ಓದಿನ ಕನಸಿಗೆ ನೀರೆರೆದಿದ್ದಾರೆ. ಹಾಲಿವಾಣದಲ್ಲಿನ ತಾತ (ತಾಯಿಯ ತಂದೆ) ಪರಪ್ಪನ ಮನೆಯಲ್ಲಿದ್ದುಕೊಂಡು ಓದಿ ಇದೀಗ ಕೈಯಲ್ಲಿ ಬೆಳ್ಳಿ ಪದಕ ಹಿಡಿದಿರುವ ಈತ ಮುಂದೆ ಮುಂದೆ ಹವ್ಯಾಸಿ ಫೋಟೋಗ್ರಾಫರ್ ಆಗುವ ಕನಸು ಹೊಂದಿದ್ದಾರೆ.

**ಸ್ವಾವಲಂಬಿ ಶ್ರಮಿಕನಿಗೆ ಧಕ್ಕಿದ ಎರಡು ಬಂಗಾರದ ಪದಕ:** ಚಿಕ್ಕವನಿದ್ದಾಗಲೇ ತಂದೆ ಕಳೆದುಕೊಂಡು ತಾಯಿಗೆ ಕಷ್ಟ ನೀಡದೆ ಸ್ವಾವಲಂಬಿಯಾಗಿ ದುಡಿದು ಓದಿ, ಇದೀಗ ಪತ್ರಿಕೋದ್ಯಮ ಸ್ನಾತಕೋತ್ತರ ಪದವಿಯಲ್ಲಿ ಎರಡು ಚಿನ್ನದ ಪದಕ ಪಡೆದ ಯುವಕನ ಕಥೆ ಇದು.

ಆಟ ಆಡುವ ವಯಸ್ಸಿನಲ್ಲಿ ಐಸ್ ಕ್ಯಾಂಡಿ ಮಾರುತ್ತಾ, ಪೇಪರ್ ಹಾಕುತ್ತಾ ಓದಿಗೆ ಬೇಕಾದ ಹಣ ಗಳಿಸುತ್ತಿದ್ದ ಹರಿಹರದ ಆಶ್ರಯ ಕಾಲೋನಿ ನಿವಾಸಿ ಆರ್.ಎಲ್. ಯೋಗೇಶ್, ಪಿಯುಸಿ, ಸ್ನಾತಕೋತ್ತರ ಓದುವಾಗ ಎಗ್ ರೈಸ್ ಅಂಗಡಿ ಇಟ್ಟು, ಹೋಟೆಲ್‌ನಲ್ಲೂ ಸಪ್ಲೈಯರ್ ಕೆಲಸ ಮಾಡಿ ಹಣಗಳಿಸುತ್ತಲೇ ಶ್ರಮಪಟ್ಟು ಓದುತ್ತಿದ್ದ.

ಸ್ನಾತಕೋತ್ತರ ಪದವಿಗೆ ಸೇರಿದ ನಂತರವೂ ಮನೆ ಮನೆಗೆ ಹಾಲು ಹಾಕುವ ಕೆಲಸ ಮಾಡುತ್ತಾ, ಸಮಯ ಸಿಕ್ಕಾಗ ಫೋಟೋಗ್ರಫಿ ಕೆಲಸ ಮಾಡಿ ತುಸು ಹಣ ಗಳಿಸಿ ವಿದ್ಯಾಭ್ಯಾಸದ ಖರ್ಚು ನೀಗಿಸಿಕೊಂಡಿದ್ದಾನೆ. ಕೊರೊನಾ ವೇಳೆ ಬಾರ್ ಬೆಂಡಿಂಗ್ ಕೆಲಸ ಕೂಡ ಮಾಡಿ ತಾಯಿಗೆ ಕಷ್ಟ ನೀಡದೆ ಸ್ವಾವಲಂಬಿ ಜೀವನ ನಡೆಸುತ್ತಲೇ ಯಶಸ್ಸು ಸಾಧಿಸಿರುವ ಕಥೆ ಇತರರಿಗೆ ಪ್ರೇರಣೆ ನೀಡಬಲ್ಲದು.

**ಕೂಡು ಕುಟುಂಬದಲ್ಲಿದ್ದೇ ನಾಲ್ಕು ಚಿನ್ನ ಪಡೆದ ಶೃತಿ:** ಬರೋಬ್ಬರಿ 30 ಜನರಿರುವ ಕೂಡು ಕುಟುಂಬದಲ್ಲಿದ್ದುಕೊಂಡು, ಅಪ್ಪನ ಜಮೀನಿನಲ್ಲಿ ಸಹಕರಿಸುತ್ತಲೇ ಓದಿ, ಸ್ನಾತಕೋತ್ತರ ಕನ್ನಡ ವಿಭಾಗದಲ್ಲಿ ನಾಲ್ಕು ಪದಕ ಪಡೆದಿದ್ದಾರೆ.

ಜಗಳೂರು ತಾಲ್ಲೂಕು ಲಿಂಗಣ್ಣನಹಳ್ಳಿಯ ಟಿ.ಶೃತಿ ಗ್ರಾಮದಿಂದ ವಿವಿವರೆಗೆ ನಿತ್ಯ 120 ಕಿ.ಮೀ. ಬಸ್‌ನಲ್ಲಿ ಸಂಚರಿಸುತ್ತಾ, ಸಾಧನೆ ಮಾಡಿದ್ದಾರೆ. ಸಾಹಿತ್ಯಾಭಿಮಾನಿ ಶೃತಿಗೆ ಕನ್ನಡ ಶಿಕ್ಷಕಿಯಾಗುವ ಕನಸಿದೆ.

**ರಸಾಯನ ಶಾಸ್ತ್ರದಲ್ಲಿ ಪದಕ:** ಬಿ.ಎನ್. ಸೌಮ್ಯ, ರಸಾಯನಶಾಸ್ತ್ರ ಸ್ನಾತಕೋತ್ತರ ಪದವಿಯಲ್ಲಿ ಬಂಗಾರದ ಪದಕದ ಸಾಧನೆ ಮಾಡಿದ್ದಾರೆ.

ರಸಾಯನಶಾಸ್ತ್ರ ಓದಿದರೆ ಭವಿಷ್ಯದಲ್ಲಿ ಅವಕಾಶಗಳ ಸಾಗರವೇ ಇದೆ ಎಂದರಿತ ಸೌಮ್ಯ, ಅದೇ ವಿಷಯ ಆರಿಸಿಕೊಂಡಿದ್ದರು. ಮೊರಾರ್ಜಿ ದೇಸಾಯಿ ಶಾಲೆಯಲ್ಲಿ ಅಡುಗೆ ಕೆಲಸ ಮಾಡುವ, ಮೂಲತಃ ಜಗಳೂರು ತಾಲ್ಲೂಕು ಅಣಬೂರಿನ ಕೆ.ಎನ್. ನಾಗರಾಜ್ ಅವರ ಮೂವರು ಮಕ್ಕಳಲ್ಲಿ ಸೌಮ್ಯ ದೊಡ್ಡವಳು.

ಕುಟುಂಬದಲ್ಲಿ ಯಾರೂ ಸ್ನಾತಕೋತ್ತರ ಪದವಿ ಪಡೆದಿಲ್ಲ. ಮಗಳಾದರೂ ಸಾಧನೆ ಮಾಡಲಿ ಎಂಬ ತಂದೆಯ ಕನಸನ್ನು ಸೌಮ್ಯವಾಗಿಯೇ ನನಸಾಗಿಸಿದ್ದಾರೆ.



**ಹರ್ಷಿತಾಗೆ ಮೂರು ಪದಕ:** ಏಕಾಂತದಲ್ಲಿ ಓದಿದರೆ ಚೆನ್ನಾಗಿ ಅರ್ಥೈಸಿಕೊಳ್ಳಬಹುದು ಎನ್ನುವ ಎಂ.ವಿ. ಹರ್ಷಿತಾ ಜೀವ ರಸಾಯನ ಶಾಸ್ತ್ರದಲ್ಲಿ ಮೂರು ಚಿನ್ನದ ಪದಕಗಳನ್ನು ಕೊರಳಿಗೆ ಹಾಕಿಕೊಂಡಿದ್ದರು.

ವಿಜ್ಞಾನ ಅಂದರೆ ಅನ್ವೇಷಣೆ ಮಾಡುವುದು. ಹೀಗಾಗಿ, ಇದನ್ನೇ ಆಯ್ಕೆ ಮಾಡಿಕೊಂಡೆ. ಹಾಸ್ಟೆಲ್‌ನಲ್ಲಿ ಓದುತ್ತಿದ್ದೆ. ಎಲ್ಲರೂ ಓದುವಾಗ ಮಲಗುತ್ತಿದ್ದೆ. ಅವರು ಮಲಗಿದ ನಂತರ ನಾನು ಎದ್ದು ಓದುತ್ತಿದ್ದೆ ಎನ್ನುವ ಹರ್ಷಿತಾ, ಚಳ್ಳಕೆರೆ ತಾಲ್ಲೂಕಿನ ಕೋಡಿಹಳ್ಳಿ ಗ್ರಾಮದ ವೀರಭದ್ರ ಮತ್ತು ಭಾಗ್ಯಮ್ಮ ಅವರ ಪುತ್ರಿ.

ಉಪನ್ಯಾಸಕಿಯಾಗುವ ಆಸೆ. ನೆಟ್, ಸ್ಲೆಟ್ ಓದುತ್ತಿದ್ದೇನೆ. ತಂಗಿ ಬಿ.ಕಾಂ. ಓದಿದ್ದಾಳೆ. ಇಬ್ಬರು ಹೆಣ್ಣು ಮಕ್ಕಳನ್ನು ಪೋಷಕರು ಓದಿಸಿದ್ದಾರೆ. ನಮ್ಮ ಬೆಳವಣಿಗೆ ಕಂಡು ಸಂಭ್ರಮಿಸಿದ್ದಾರೆ ಅನ್ನುತ್ತಾರೆ ಹರ್ಷಿತಾ.

**ಆವರಗೆರೆ ಅಂಜಿನಪ್ಪಗೆ ಎರಡು ಪದಕ:** ದಾವಣಗೆರೆ ಆವರಗೆರೆಯ ಗೋಶಾಲೆ ಬಳಿ ವಾಸವಾಗಿರುವ ಈ. ಅಂಜಿನಪ್ಪ ದೃಶ್ಯಕಲಾ ಮಹಾವಿದ್ಯಾಲಯದಲ್ಲಿ ಓದಿ ಎರಡು ಚಿನ್ನದ ಪದಕ ಪಡೆದಿದ್ದರು.

ತುಸು ಕೃಷಿ ಭೂಮಿ ಹೊಂದಿರುವ ತಂದೆ ಈರಪ್ಪ, ತಾಯಿ ಶಿವಮ್ಮ ಅವರ ಪುತ್ರ ಅಂಜಿನಪ್ಪಗೆ ಚಿತ್ರಕಲೆ ಎಂದರೆ ಪ್ರೀತಿ, ಆಸಕ್ತಿ. ಅದೇ ಇಂದು ಎರಡು ಪದಕ ತಂದುಕೊಟ್ಟಿದೆ. ಪದಕ ನಿರೀಕ್ಷಿಸಿರಲಿಲ್ಲ. ಆದರೆ ಪದಕ ಪಡೆದಿರುವುದು ನನ್ನ ಹಾಗೂ ಕುಟುಂಬದ ಸಂತೋಷ ಹೆಚ್ಚಿಸಿದೆ ಎನ್ನುತ್ತಾರೆ ಅಂಜಿನಪ್ಪ.


**ಅರ್ಧಗಂಟೆ ಓದಿದರೂ ಸಾಕು:** ಹತ್ತು ಗಂಟೆ ಓದುವುದು ಮುಖ್ಯವಲ್ಲ. ಅರ್ಧ ಗಂಟೆ ಓದಿದರೂ ಸಾಕು. ಆದರೆ ಇಷ್ಟುಪಟ್ಟು ಓದಬೇಕು. ಆಗ ಮಾತ್ರ ಸಾಧನೆ ಮಾಡಲು ಸಾಧ್ಯ ಎಂದವರು ಶ್ರೀಮತಿ ಎಂ.ಜ್ಯೋತಿ.

ಸ್ನಾತಕೋತ್ತರ ವಾಣಿಜ್ಯ ವಿಭಾಗದಲ್ಲಿ ಎರಡು ಚಿನ್ನದ ಪದಕ ಪಡೆದಿದ್ದ ಅವರು, ಕಿರಿಯರಿಗೆ ಹೇಳಿದ ಕಿವಿ ಮಾತಿದು.

ಮೂರು ತಿಂಗಳ ಹಿಂದೆ ವಿವಾಹವಾಗಿದೆ. ಪತಿ ಗದಗದಲ್ಲಿ ಜ್ಯೂಸ್ ಸ್ಟಾಲ್ ಇಟ್ಟುಕೊಂಡಿದ್ದಾರೆ. ನನ್ನ ಶಿಕ್ಷಣಕ್ಕೆ ಪ್ರೋತ್ಸಾಹಿಸುತ್ತಿದ್ದಾರೆ. ಶಿಕ್ಷಕಿಯಾಗುವ ಕನಸಿದೆ ಎಂದ ಎಂ.ಜ್ಯೋತಿ, ದಾವಣಗೆರೆ ಶಿವಾಲಿ ಚಿತ್ರಮಂದಿರ ಬಳಿಯ ನಿವಾಸಿ ಮಂಜುನಾಥ ಮತ್ತು ವೀಣಾಬಾಯಿ ಅವರ ಪುತ್ರಿ.

ಆಡಳಿತ ನಿರ್ವಹಣಾ ಶಾಸ್ತ್ರ (ಎಂ.ಬಿ.ಎ) ವಿಭಾಗದ ವಿದ್ಯಾರ್ಥಿನಿ ಎಸ್.ಎನ್. ಸ್ವಪ್ನ ಅವರು ಐದು ಪದಕಗಳೊಂದಿಗೆ ಚಿನ್ನದ ಹುಡುಗಿ ಗೌರವಕ್ಕೆ ಪಾತ್ರರಾದರು. ಸ್ನಾತಕೋತ್ತರ ಕನ್ನಡ ವಿಭಾಗದಲ್ಲಿ ಚಿತ್ರದುರ್ಗ ಪಿ.ಜಿ. ಸೆಂಟರ್‌ನ ಟಿ. ಶೃತಿ ನಾಲ್ಕು ಚಿನ್ನದ ಪದಕ ಪಡೆದಿದ್ದರೆ, ದಾವಣಗೆರೆ ವಿವಿಯ ಸ್ನಾತಕೋತ್ತರ ಅರ್ಥಶಾಸ್ತ್ರ ವಿಭಾಗದಲ್ಲಿ ಎಲ್.ಎಸ್. ಕಂಬಾಳಿಮಠ, ಸ್ನಾತಕೋತ್ತರ ಜೀವರಸಾಯನಶಾಸ್ತ್ರ ವಿಭಾಗದಲ್ಲಿ ಎಂ.ವಿ. ಹರ್ಷಿತಾ ಮತ್ತು ಗಣಿತ ಶಾಸ್ತ್ರ ವಿಭಾಗದಲ್ಲಿ ಡಿ.ಕೆ. ಅರ್ಚನಾ ಅವರುಗಳು ತಲಾ ಮೂರು ಚಿನ್ನದ ಪದಕಗಳನ್ನು ಪಡೆದಿದ್ದಾರೆ.

# ಜಾತ್ರೆ : ಎತ್ತುಗಳಿಗೆ ವಿಶೇಷ ಪೂಜೆ




ಹರಿಹರ, ಮಾ. 24 - ಗ್ರಾಮದೇವತೆ ಊರಮ್ಮ ದೇವಿಯ ಜಾತ್ರೆ ಪ್ರಯುಕ್ತ ಮಾಜೇನಹಳ್ಳಿ ಮತ್ತು ಕಸಬಾ ಗ್ರಾಮದ ರೈತರು ಎತ್ತುಗಳನ್ನು, ಅಲಂಕಾರಿಕ ವಸ್ತುಗಳಿಂದ ಶೃಂಗಾರ ಮಾಡಿ ಪ್ರಮುಖ ವೃತ್ತದಲ್ಲಿ ಸಂಚರಿಸಿ, ನಂತರ ದೇವಸ್ಥಾನ ರಸ್ತೆಯ ಚೌಕಿ ಮನೆಯಲ್ಲಿ ದೇವಿಯ ಮುಂದೆ ನಿಲ್ಲಿಸಿ ವಿಶೇಷ ಪೂಜೆ ಸಲ್ಲಿಸಿ, ಆಶೀರ್ವಾದ ಪಡೆದುಕೊಂಡರು.

ಚೌಕಿ ಮನೆಯಲ್ಲಿ ಕಸಬಾ ಮತ್ತು ಮಾಜೇನಹಳ್ಳಿ ಗ್ರಾಮದವರು ಚರಗ ಉಲುಸನ್ನು ಹೊಡೆದು ಜೋಳವನ್ನು ಪಡೆದುಕೊಂಡರು. ಹಾಸ್ಯಗಾರರು ವಿವಿಧ ರೀತಿಯ ಹಾಸ್ಯಮಯ ಹಾಡುಗಳನ್ನು ಹೇಳಿ, ಕುಣಿದು ಸಾರ್ವಜನಿಕರಿಗೆ ಮನಸ್ಸಂತೋಷಪಡಿಸಿದರು. ದೇವಿಯ ದರ್ಶನಕ್ಕೆ ಭಾರೀ ಸಂಖ್ಯೆಯಲ್ಲಿ ಭಕ್ತರ ದಂಡು ಹರಿದು ಬಂದಿದ್ದರಿಂದ ರಾಣಿ ಚೆನ್ನಮ್ಮ ವೃತ್ತ, ಮುಖ್ಯ ರಸ್ತೆ, ಹೆಚ್. ಶಿವಪ್ಪ ವೃತ್ತ, ಹಳೆ ಪಿ.ಬಿ. ರಸ್ತೆ, ಹರಪನಹಳ್ಳಿ ರಸ್ತೆ ಸೇರಿದಂತೆ ಹಲವಾರು ರಸ್ತೆಗಳಲ್ಲಿ ವಾಹನ ಸವಾರರು ಮತ್ತು ಸಾರ್ವಜನಿಕರು ಹರಸಾಹಸ ಪಟ್ಟರು.

ಈ ಸಂದರ್ಭದಲ್ಲಿ ಮಾಜೇನಹಳ್ಳಿ ಗೌಡ್ರು ಚನ್ನಬಸಪ್ಪ, ಕಸಬಾ ಗೌಡ್ರು ಲಿಂಗರಾಜ್ ಪಾಟೀಲ್, ಉತ್ಸವ ಸಮಿತಿಯ ಅಧ್ಯಕ್ಷ ಕೆ.ಅಣ್ಣಪ್ಪ, ಕಾರ್ಯದರ್ಶಿ ಬೆಣ್ಣೆ ರೇವಣಸಿದ್ದಪ್ಪ, ಖಜಾಂಚಿ ಶೇರಾಪುರ ರಾಜಪ್ಪ ಸಹ ಕಾರ್ಯದರ್ಶಿ ಪಾಲಾಕ್ಷಪ್ಪ, ಹಳ್ಳದಕೇರಿ ಬಸವನಗೌಡ, ಗಿರೀಶ್ ಗೌಡ, ಬೆಣ್ಣೆ ಸಿದ್ದಪ್ಪ, ಮಜ್ಜಿಗೆ ವೀರಭದ್ರಪ್ಪ, ಬೆಳಕೇರಿ ಚಂದ್ರಪ್ಪ, ಮುದೇಗೌಡ್ರು ಹನುಮಂತಪ್ಪ, ಗೌಡ್ರು ಮಲ್ಲೇಶಪ್ಪ, ಹಾವನೂರು ಈರಣ್ಣ ಹಾಗು ಇತರರು ಹಾಜರಿದ್ದರು.

# ನಗರದಲ್ಲಿಂದು ಓಶೋ ಧ್ಯಾನ

ಓಶೋ ಸನ್ನಿಧಿ ಇನ್‌ಸೈಟ್ ಫೌಂಡೇಶನ್ ವತಿಯಿಂದ ಇಂದಿನಿಂದ ಇದೇ ದಿನಾಂಕ 27 ರವರೆಗೆ ಪ್ರತಿದಿನ ಬೆಳಿಗ್ಗೆ 6 ರಿಂದ 7.30 ರವರೆಗೆ ನಗರದ ಆಲೂರ್ ಕನ್ವೆನ್ಷನ್ ಹಾಲ್‌ನಲ್ಲಿ ಓಶೋ ಧ್ಯಾನ ಶಿಬಿರ ನಡೆಯಲಿದೆ ಎಂದು ಅರ್ಚನಾ (97385 72318), ಪುಷ್ಪ (90367 19573) ತಿಳಿಸಿದ್ದಾರೆ.

# ಚಿತ್ರ ಕಲಾವಿದೆ ಉಷಾಗೆ ಡಾಕ್ಟರೇಟ್



ದಾವಣಗೆರೆ, ಮಾ.24- ನಗರದ ಕಾಯಿಪೇಟೆ ನಿವಾಸಿ, ಚಿತ್ರ ಕಲಾವಿದರಾದ ಆರ್.ಉಷಾರಾಣಿ ಅವರಿಗೆ ಏಶಿಯಾ ವೇದಿಕ್ ಕಲ್ಚರ್ ರೀಸರ್ಚ್ ಯುನಿವರ್ಸಿಟಿ ಗೌರವ ಡಾಕ್ಟರೇಟ್ ನೀಡಿದೆ. ಡ್ರಾಯಿಂಗ್ ಶೀಟ್‌ನಲ್ಲಿ ಚಿತ್ರವನ್ನು ಬರೆದು ಕೆತ್ತನೆ ಮಾಡಿರುವ ಕಲೆಗೆ ಈ ಪದವಿ ದೊರೆತಿದೆ. ತಮಿಳುನಾಡಿನ ಹೊಸೂರಿನಲ್ಲಿ ಮಾ.19ರಂದು ಜರುಗಿದ ಸಮಾರಂಭದಲ್ಲಿ ಉಪಕುಲಪತಿಗಳು ಉಷಾರಾಣಿ ಅವರಿಗೆ ಗೌರವ ಡಾಕ್ಟರೇಟ್ ಪ್ರದಾನ ಮಾಡಿದರು.

# ದುಗ್ಗಮ್ಮನ ಜಾತ್ರೆ : ನಗರದಲ್ಲಿ ಇಂದು ರಸಮಂಜರಿ ಕಾರ್ಯಕ್ರಮ

ನಗರ ದೇವತೆ ಶ್ರೀ ದುರ್ಗಾಂಬಿಕಾ ದೇವಿ ಜಾತ್ರಾ ಮಹೋತ್ಸವದ ಅಂಗವಾಗಿ ಇಂದು ಸಂಜೆ 6.30ಕ್ಕೆ ಸಿಪಿಐ ಗಜೇಂದ್ರಪ್ಪ ಅವರಿಂದ ಚಿತ್ರಗೀತೆ ಹಾಗೂ ತುಮಕೂರಿನ ಸಂಗೀತ ಮೆಲೋಡಿಸ್ ಅವರಿಂದ ರಸಮಂಜರಿ ಕಾರ್ಯಕ್ರಮ ನಡೆಯಲಿದೆ.

# ಸ್ನಾತಕೋತ್ತರ ಇಂಗ್ಲಿಷ್ ವಿಭಾಗದಲ್ಲಿ ಚಿನ್ನ



ಜಗಳೂರು, ಮಾ.24- ಪಟ್ಟಣದ ಗಂಗಾಧರ್ ಹಾಗೂ ಸರಸ್ವತಿ ದಂಪತಿಯ ಪುತ್ರಿ ಜಿ. ಉಮಾ ಅವರು ಸ್ನಾತಕೋತ್ತರ ಇಂಗ್ಲಿಷ್ ವಿಭಾಗದಲ್ಲಿ ದ್ವಿತೀಯ ರ್‍ಯಾಂಕ್ ಗಳಿಸಿದ್ದಾರೆ. ದಾವಣಗೆರೆ ವಿಶ್ವವಿದ್ಯಾನಿಲಯದ 9ನೇ ಘಟಿಕೋತ್ಸವ ಸಮಾರಂಭದಲ್ಲಿ ಚಿನ್ನದ ಪದಕ ನೀಡಿ, ಗೌರವಿಸಲಾಗಿದೆ.

## ಪ್ರಥಮ ವರ್ಷದ ಪುಣ್ಯಸ್ಮರಣೆ



**ಶ್ರೀ ರಾಮಣ್ಣ ಎ.ಎಂ.**

ಮಾಜಿ ಅಧ್ಯಕ್ಷರು, ಮಹಾನಗರ ಪಾಲಿಕೆ ಗುತ್ತಿಗೆದಾರರ ಸಂಘದ

ನೀವು ನಮ್ಮನ್ನಗಲಿ (25.03.2022) ಇಂದಿಗೆ ಒಂದು ವರ್ಷ ಕಳೆಯಿತು.
ಸದಾ ನಿಮ್ಮ ಸ್ಮರಣೆಯಲ್ಲಿರುವ,
ನೀವು ಹಾಕಿಕೊಟ್ಟ ಮಾರ್ಗದಲ್ಲಿ ಮುನ್ನಡೆಯುತ್ತಿರುವ..

**ಕುಟುಂಬ ವರ್ಗ, ಸ್ನೇಹಿತರು**
ವಿಜಯನಗರ ಬಡಾವಣೆ, ಕೊಂಡಜ್ಜಿ ರಸ್ತೆ, ದಾವಣಗೆರೆ.

## ಅಶೋಕ ಎಸ್. ಬೂದಿಹಾಳ ನಿಧನ



ದಾವಣಗೆರೆ ವಾಸಿ
ನಿವೃತ್ತ ಕಾರ್ಯಪಾಲಕ ಇಂಜಿನಿಯರ್
**ಶ್ರೀಯುತ ಅಶೋಕ ಎಸ್. ಬೂದಿಹಾಳ**
(62) ಇವರು, ದಿನಾಂಕ 23.03.2022ನೇ ಬುಧವಾರ ಉತ್ತರ ಪ್ರದೇಶದ ಪ್ರಯಾಗ್‌ರಾಜ್‌ನಲ್ಲಿ ದೈವಾಧೀನರಾದರೆಂದು ತಿಳಿಸಲು ವಿಷಾದಿಸುತ್ತೇವೆ. ಮೃತರ ಪಾರ್ಥಿವ ಶರೀರವನ್ನು ದಿನಾಂಕ: 25.03.2022ನೇ ಶುಕ್ರವಾರ ಬೆಳಗ್ಗೆ 11.00 ಗಂಟೆಯವರೆಗೆ ದಾವಣಗೆರೆಯ ಎಸ್. ನಿಜಲಿಂಗಪ್ಪ ಬಡಾವಣೆಯ 2ನೇ ಮೇನ್, 3ನೇ ಕ್ರಾಸ್‌ನಲ್ಲಿರುವ 'ಶಿವ ಸಾವಿತ್ರಿ' ನಿಲಯದಲ್ಲಿ ದರ್ಶನಕ್ಕೆ ಇರಿಸಲಾಗುವುದು. ತದನಂತರ ಹರಿಹರ ತಾಲ್ಲೂಕು ನಂದಿತಾವರೆ ಗ್ರಾಮದಲ್ಲಿರುವ ಮೃತರ ಜಮೀನಿನಲ್ಲಿ ಮಧ್ಯಾಹ್ನ 3.00 ಗಂಟೆಗೆ ಅಂತ್ಯಕ್ರಿಯೆ ನೆರವೇರಿಸಲಾಗುವುದು.

ಇಂತಿ ದು:ಖ ತಪ್ತರು :

- ಪತ್ನಿ: ಶ್ರೀಮತಿ ಶೋಭ ಅಶೋಕ ಬೂದಿಹಾಳ
- ಶ್ರೀಮತಿ ಸಂಗಮ್ಮ ಚಂದ್ರಶೇಖರ ಬೂದಿಹಾಳ ಮತ್ತು ಮಕ್ಕಳು, ಮೊಮ್ಮಕ್ಕಳು
- ಶ್ರೀಮತಿ ಅಮೃತಮ್ಮ ಎಸ್.ಬಿ. ಮೋಹನ ಮತ್ತು ಮಕ್ಕಳು, ಮೊಮ್ಮಕ್ಕಳು
- ಶ್ರೀಮತಿ ಸುನಂದಮ್ಮ ಎನ್.ಪಿ ನಂದಿಗೌಡ್ರು ಮತ್ತು ಮಕ್ಕಳು, ಮೊಮ್ಮಕ್ಕಳು
- ಶ್ರೀಮತಿ ಮಂಜುಳ ಬಸವರಾಜ ಬೂದಿಹಾಳ ಮತ್ತು ಮಕ್ಕಳು
- ಅನ್ನಪೂರ್ಣಮ್ಮ ಎಸ್, ಬೂದಿಹಾಳ
- ಶ್ರೀಮತಿ ಇಂದಿರಾ ಎಸ್.ಬಿ ಮಲ್ಲಿಕಾರ್ಜುನ ಮತ್ತು ಮಕ್ಕಳು
- ಬೂದಿಹಾಳ ವಂಶಸ್ಥರು, ತಡಕನಹಳ್ಳಿ ಮತ್ತು ನಂದಿತಾವರೆ ಗ್ರಾಮಸ್ಥರು
- ಹಾಗೂ ಅಪಾರ ಬಂಧು ಮಿತ್ರರು

ಮೊ : 90080 06873, 98801 78222, 90086 87438

AARSHIRAJ
Builders & Developers Ltd.
A New Venture in the Urban Development & Shelter Building
WE ARE HIRING!
ಉದ್ಯೋಗದ ಚಿಂತೆ ಬಿಡಿ,
ಆರ್ಶಿರಾಜ್ ಜೊತೆ ಹೆಜ್ಜೆ ಇಡಿ.
ಆರ್ಶಿರಾಜ್ ಬಿಲ್ಡರ್ಸ್ ಮತ್ತು ಡೆವಲಪರ್ಸ್ ಲಿಮಿಟೆಡ್
ಖಾಲಿ ಇರುವ ಮಾರ್ಕೆಟಿಂಗ್ ಎಕ್ಸಿಕ್ಯೂಟಿವ್ ಹುದ್ದೆಗೆ
ಸೇರಬಯಸುವವರಿಗೆ ಇಲ್ಲಿದೆ ಅವಕಾಶ.
Job Title : Marketing Executives
Qualification : Any Degree/Freshers Can Also Apply
Location : Shivamogga/Davanagere/Chitradurga/Ranibennur/Hassan/Mysore/Chikmagalur/Tumkur
Salary : Rs 10,000 to Rs 15000 per month + Incentive
Interested Candidates Send your CV to : info@aarshiraj.com Apply Now
www.aarshiraj.in
82968 03867, 97407 17867
91486 76867, 82961 62867
86489 99555
HOME LOAN @
0% INTEREST, EASY EMI

JANATHAVANI - Published, Owned and Printed by Vikas Shadaksharappa Mellekatte, at Jayadhara Offset Printers, # 605, 'Jayadhara' Hadadi Road, Davangere - 5, Published from # 605, 'Jayadhara' Hadadi Road, Davangere - 5. Editor Vikas Shadaksharappa Mellekatte